
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಬೆಂಗಳೂರಿನಲ್ಲಿ ನಡೆದ ಆರೆಸ್ಸೆಸ್‌ನ ಅಖಿಲ ಭಾರತೀಯ ಶೃಂಗ ವಾದ್ಯ ಶಿಬಿರ 'ಸ್ವರಾಂಜಲಿ–2016' ಸಮಾರೋಪ ಸಮಾರಂಭ (ಡ್ರೋನ್ ಕ್ಯಾಮೆರಾದಲ್ಲಿ ಸೆರೆಹಿಡಿದ ದೃಶ್ಯ). ಭಾರತದೆಲ್ಲೆಡೆಯಿಂದ 2000ಕ್ಕೂ ಅಧಿಕ ಮಂದಿ ಘೋಷ್ ವಾದಕರು ಭಾಗವಹಿಸಿದ್ದರು.

ಸಂಪುಟ : 37 ಸಂಚಿಕೆ : 12 ಮನ್ಮಥ–ಮಕರ ಕಲಿಯುಗಾಬ್ದ 5117 1–2–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಸಿಕ್ಕಿಂ : ಸಂಪೂರ್ಣ ಸಾವಯವ ರಾಜ್ಯ

ಹಿಮಾಲಯದ ತಪ್ಪಲಿನಲ್ಲಿರುವ ಪುಟ್ಟ ರಾಜ್ಯ ಸಿಕ್ಕಿಂ ಸುಮಾರು 75ಸಾವಿರ ಹೆಕ್ಟೇರ್ ವ್ಯವಸಾಯಯೋಗ್ಯ ಭೂಮಿಯಲ್ಲಿ ಸಾವಯವ ಕೃಷಿ ಕೈಗೊಳ್ಳುವ ಮೂಲಕ ಭಾರತದ ಮೊದಲ ಸಂಪೂರ್ಣ ಸಾವಯವ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆ ಮೂಲಕ ಇಡೀ ರಾಷ್ಟ್ರದ ಗಮನ ಸೆಳೆದಿದೆ. ಜನವರಿ 18ರಂದು ಗ್ಯಾಂಗ್ಟೋಕ್‌ನಲ್ಲಿ ನಡೆದ ರಾಷ್ಟ್ರೀಯ ಕೃಷಿ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಿಕ್ಕಿಂ ಅನ್ನು ಸಂಪೂರ್ಣ ಸಾವಯವ ರಾಜ್ಯವೆಂದು ಅಧಿಕೃತವಾಗಿ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಿಕ್ಕಿಂನ ಸಾವಯವ ಹಾದಿಯ ಪರಿಚಯ ಇಲ್ಲಿದೆ.

ಹನ್ನೆರಡು ವರ್ಷಗಳ ಹಿಂದೆಯೇ ಸಿಕ್ಕಿಂ ಸಂಪೂರ್ಣ ಸಾವಯವ ರಾಜ್ಯವಾಗಿ ರೂಪುಗೊಳ್ಳುವ ಸಂಕಲ್ಪ ಕೈಗೊಂಡಿತ್ತು. 2003ರಲ್ಲಿ ಪವನ್ ಚಾಮ್ಲಿಂಗ್ ನೇತೃತ್ವದ ಸರ್ಕಾರ ವಿಧಾನಸಭೆಯಲ್ಲಿ ಸಿಕ್ಕಿಂ ಅನ್ನು ಸಾವಯವ ರಾಜ್ಯವನ್ನಾಗಿ ರೂಪಿಸುವ ನಿರ್ಧಾರವನ್ನು ಪ್ರಕಟಿಸುವ ಮೂಲಕ ಈ ಸಂಕಲ್ಪವನ್ನು ಕಾರ್ಯರೂಪಕ್ಕೆ ತಂದಿತು. ಆ ಬಳಿಕ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಮಾರಾಟ ಹಾಗೂ ಕೃಷಿಯೋಗ್ಯ ಭೂಮಿಯಲ್ಲಿ ಅವುಗಳ ಬಳಕೆಗೆ ಸರ್ಕಾರ ನಿಷೇಧ ಹೇರಿತು. ಈ ಆದೇಶವನ್ನು ಮೀರಿ ಯಾವುದೇ ವ್ಯಕ್ತಿ ಕೃಷಿಗೆ ರಾಸಾಯನಿಕ ಬಳಸಿದರೆ ಅಥವಾ ಮಾರಾಟ ಮಾಡಿದರೆ ಮೂರು ತಿಂಗಳ ಜೈಲು ಶಿಕ್ಷೆಯ ಜತೆಗೆ 25 ಸಾವಿರದಿಂದ ಒಂದು ಲಕ್ಷ ರೂ. ತನಕ ದಂಡ ತೆರಬೇಕಾಗಿತ್ತು. ಹೀಗಾಗಿ ಕೃಷಿಕರಿಗೆ ಜೈವಿಕ ಗೊಬ್ಬರ ಬಳಕೆ ಬಿಟ್ಟು ಅನ್ಯಮಾರ್ಗವಿರಲಿಲ್ಲ. ಸಿಕ್ಕಿಂ ಸಂಪೂರ್ಣ ಸಾವಯವ ರಾಜ್ಯವಾಗಿಸುವ ನಿಟ್ಟಿನಲ್ಲಿ ಇದು ಮಹತ್ವದ ಉಪಕ್ರಮವಾಯಿತು. ರಾಷ್ಟ್ರೀಯ ಸಾವಯವ ಉತ್ಪಾದನಾ ಕಾರ್ಯಕ್ರಮದಲ್ಲಿನ ಮಾರ್ಗಸೂಚಿಗಳಿಗೆ ಅನುಗುಣವಾಗಿ ಜೈವಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ರಾಜ್ಯದ ಸುಮಾರು 75 ಸಾವಿರ ಹೆಕ್ಟೇರ್ ಕೃಷಿ ಭೂಮಿಯನ್ನು ಸಾವಯವ ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. 'ಸಿಕ್ಕಿಂ ಸಾವಯವ ಮಿಷನ್'ನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಅನ್ಬಳಗನ್ ಪ್ರಕಾರ, 2015ರ ಡಿಸೆಂಬರ್‌ನಲ್ಲೇ ಸಿಕ್ಕಿಂ ಸಂಪೂರ್ಣ ಸಾವಯವ ರಾಜ್ಯವಾಗಿ ರೂಪುಗೊಂಡಿದೆ.





### ಕೃಷಿ ಪ್ರಧಾನ ರಾಜ್ಯ

ಕೃಷಿ ಪ್ರಧಾನ ರಾಜ್ಯವಾಗಿರುವ ಸಿಕ್ಕಿಂನ ಜೀವನಾಡಿ ತೀಸ್ತಾ ನದಿ. ರಾಜ್ಯದ ಶೇ. 64ರಷ್ಟು ಜನರು ಜೀವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿದ್ದಾರೆ. ಸಿಕ್ಕಿಂ 75ಸಾವಿರ ಹೆಕ್ಟೇರ್ ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ. ಇದು ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದ ಶೇ. 15.36ರಷ್ಟಿದೆ. ಇಲ್ಲಿನ ಕೃಷಿಕರು ಹೆಚ್ಚಾಗಿ ಮಿಶ್ರಬೆಳೆ ಬೆಳೆಯುತ್ತಾರೆ. ಭತ್ತ, ಆಲೂಗಡ್ಡೆ, ದೊಡ್ಡ ಏಲಕ್ಕಿ, ಶುಂಠಿ, ಕಿತ್ತಳೆ ಇಲ್ಲಿನ ಪ್ರಮುಖ ಬೆಳೆಗಳು. ಸಿಕ್ಕಿಂ ದೇಶದಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಏಲಕ್ಕಿ ಬೆಳೆಯುವ ರಾಜ್ಯ.

- **ಸಿಕ್ಕಿಂನ ಒಟ್ಟು ಭೂಭಾಗದಲ್ಲಿ ಶೇ. 15.36ರಷ್ಟು ಪ್ರದೇಶ ಮಾತ್ರ ಕೃಷಿಯೋಗ್ಯವಾಗಿದೆ. ಉಳಿದ ಪ್ರದೇಶ ಅರಣ್ಯದಿಂದ ಆವೃತವಾಗಿದೆ.**
- **64 ಸಾವಿರಕ್ಕೂ ಹೆಚ್ಚು ರೈತರು ಸಾವಯವ ಕೃಷಿಯಲ್ಲಿ ತೊಡಗಿದ್ದಾರೆ.**
- **ಸಾವಯವ ಕೃಷಿಯನ್ನು ಉತ್ತೇಜಿಸುವ ಹಾಗೂ ರಾಸಾಯನಿಕ ಬಳಕೆಗೆ ನಿಷೇಧ ಹೇರುವ ಉದ್ದೇಶದಿಂದ ಸಿಕ್ಕಿಂ ರಾಜ್ಯ ಸರ್ಕಾರ 2004ರಿಂದ ಪ್ರತಿವರ್ಷ ರಾಸಾಯನಿಕ ಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ಶೇ. 10ರಷ್ಟು ತಗ್ಗಿಸಲು ಪ್ರಾರಂಭಿಸಿತು.**
- **ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಮಾರಾಟ ಮಾಡುವ ಅಂಗಡಿಗಳನ್ನು ಮುಚ್ಚಲಾಯಿತು.**

### ವರದಾನವಾದ ಗೋಸಂಪತ್ತು

ಭಾರತದಲ್ಲಿ ಗೋವನ್ನು ಪೂಜ್ಯ ಸ್ಥಾನದಲ್ಲಿಟ್ಟಿದ್ದು ಮಾತ್ರವಲ್ಲದೇ ಅದೊಂದು ಸಂಪತ್ತು ಎಂದೇ ಭಾವಿಸಲಾಗಿತ್ತು. ಆದರೆ ಇಂದಿನ ಮುಂದುವರಿದ ಸಮಾಜ ಇದನ್ನು ಗುರುತಿಸುವಲ್ಲಿ ಎಡವಿದೆ. ಆದರೆ ಸಿಕ್ಕಿಂನ ರೈತರು ಮಾತ್ರ ಗೋ ಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಉತ್ತಮ ಆದಾಯ ಗಳಿಸುತ್ತಿದ್ದಾರೆ. ಗೋಮೂತ್ರ ಹಾಗೂ ಗೊಬ್ಬರದ ಸಹಾಯದಿಂದಲೇ ಅವರು ಕೃಷಿಗೆ ಹೊಸ ಆಯಾಮ ನೀಡಿದ್ದಾರೆ. ರಾಸಾಯನಿಕ ಕೃಷಿಗೆ ಮಾರುಹೋಗಿ ಕೈಸುಟ್ಟುಕೊಂಡಿದ್ದ ರೈತರ ಪಾಲಿಗೆ ಸಾವಯವ ಕೃಷಿ ಸಂಜೀವಿನಿಯಾಗಿದ್ದು, ಅವರ ಬಡತನವನ್ನು ನೀಗಿದೆ. ಇಲ್ಲಿನ ರೈತರು ವಾರ್ಷಿಕ ಎರಡು ಲಕ್ಷ ರೂ. ವ್ಯಯಿಸಿ 6–7 ಲಕ್ಷ ರೂ. ತನಕ ಲಾಭ ಗಳಿಸುತ್ತಿದ್ದಾರೆ. ಅಷ್ಟೇ ಅಲ್ಲ, ಇದರಲ್ಲಿ 4–5 ಲಕ್ಷ ರೂ. ತನಕ ಉಳಿತಾಯ ಕೂಡ ಮಾಡುತ್ತಿದ್ದಾರೆ.

### ಸಾವಯವ ಪ್ರವಾಸೋದ್ಯಮ

ಹಿಮಾಚ್ಛಾದಿತ ಗಿರಿಶ್ರೇಣಿಗಳಿಂದ ಕೂಡಿರುವ ಸಿಕ್ಕಿಂನಲ್ಲಿ ಅನೇಕ ಪ್ರವಾಸಿತಾಣಗಳಿವೆ. ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಹೀಗಾಗಿ ಪ್ರವಾಸೋದ್ಯಮವನ್ನು ಇನ್ನಷ್ಟು ಆಕರ್ಷಕ ಹಾಗೂ ಲಾಭದಾಯಕವನ್ನಾಗಿಸುವ ಉದ್ದೇಶದಿಂದ ಸಿಕ್ಕಿಂ ಸರ್ಕಾರ ಸಾವಯವ ರೆಸಾರ್ಟ್‌ಗಳನ್ನು ನಿರ್ಮಿಸಿದೆ. ಈ ರೆಸಾರ್ಟ್‌ಗಳಲ್ಲಿ ಉಳಿಯುವ ಪ್ರವಾಸಿಗರಿಗೆ ಕೈತೋಟದಲ್ಲಿ ಬೆಳೆದ ಸಾವಯವ ತರಕಾರಿ, ಹಣ್ಣುಗಳನ್ನು ಆರಿಸಿ ಅದರಿಂದಲೇ ಅಡುಗೆ ತಯಾರಿಸಿ ತಿನ್ನುವ ಅವಕಾಶ ಕಲ್ಪಿಸಲಾಗಿದೆ. ಸಾವಯವ ತರಕಾರಿ, ಹಣ್ಣುಗಳತ್ತ ಜನರು ಹೆಚ್ಚಿನ ಒಲವು ತೋರುತ್ತಿದ್ದಾರೆ. ಹೀಗಾಗಿ ಇಂಥ ಸಾವಯವ ರೆಸಾರ್ಟ್‌ಗಳಿಗೆ ಬೇಡಿಕೆ ಹೆಚ್ಚಿದ್ದು, ಸರ್ಕಾರದ ಬೊಕ್ಕಸ ತುಂಬುತ್ತಿದೆ.

### ಭಾರಿ ಬೇಡಿಕೆ

ವಿಶ್ವದಾದ್ಯಂತ ಸಾವಯವ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆಯಿದೆ. ಮಾರುಕಟ್ಟೆಯಲ್ಲಿ ಸಾವಯವ ಉತ್ಪನ್ನಗಳಿಗೆ ಉತ್ತಮ ಬೆಲೆಯೂ ಸಿಗುತ್ತಿದೆ. ಇಂಥ ಉತ್ಪನ್ನಗಳು ಆರೋಗ್ಯ ಮತ್ತು ಪರಿಸರ ಎರಡಕ್ಕೂ ಪೂರಕವಾಗಿರುವ ಕಾರಣ ಜನಮೆಚ್ಚುಗೆ ಗಳಿಸುತ್ತಿವೆ. ಹೀಗಾಗಿ ಸಿಕ್ಕಿಂನ ಆರ್ಥಿಕತೆಗೂ ಸಾವಯವ ಕೃಷಿ ಉತ್ತೇಜನ ನೀಡಲಿದೆ. ಸಿಕ್ಕಿಂ ವಾರ್ಷಿಕ 80 ಸಾವಿರ ಟನ್ ಸಾವಯವ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುತ್ತದೆ. ದೇಶದಲ್ಲಿನ ಒಟ್ಟು ಸಾವಯವ ಕೃಷಿ ಉತ್ಪನ್ನದ ಪ್ರಮಾಣ 12.40 ಲಕ್ಷ ಟನ್. ಅಂದರೆ ದೇಶದ ಸಾವಯವ ಕೃಷಿ ಉತ್ಪನ್ನದಲ್ಲಿ ಸಿಕ್ಕಿಂ ಸಿಂಹಪಾಲು ಹೊಂದಿದೆ. ಸಿಕ್ಕಿಂ ಹೊರತುಪಡಿಸಿ ಕೇರಳ, ಮಿಜೋರಾಂ, ಅರುಣಾಚಲ ಪ್ರದೇಶ ಮುಂತಾದ ರಾಜ್ಯಗಳು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಮುಂದಡಿಯಿಟ್ಟಿವೆ.

## ಮಾಲ್ಡಾ: ಮುಸ್ಲಿಂ ದೌರ್ಜನ್ಯಕ್ಕೆ ಒಳಗಾದ ಇನ್ನೊಂದು ಕಾಶ್ಮೀರ

ಅನಗತ್ಯ ಗಲಭೆಯೆಬ್ಬಿಸಿ ಕಾನೂನು ಸುವ್ಯವಸ್ಥೆಯನ್ನು ಹಾಳುಗೆಡವಿ ಸಾಮಾನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ಮುಸ್ಲಿಂ ಮೂಲಭೂತವಾದಿಗಳ ಪುಂಡಾಟಕ್ಕೆ ಹೊಸ ಸೇರ್ಪಡೆ ಇತ್ತೀಚೆಗೆ ಪಶ್ಚಿಮ ಬಂಗಾಳದ ಗಡಿಜಿಲ್ಲೆ ಮಾಲ್ಡಾದ ಕಾಲಿಯಾಚಕ್‌ನಲ್ಲಿ ನಡೆದ ಕೋಮು ಹಿಂಸಾಚಾರ. ಎಂದಿನಂತೆ ಈ ಘಟನೆ ಮಮತಾ ಬ್ಯಾನರ್ಜಿಯಂತಹ ಅವಕಾಶವಾದಿ ರಾಜಕಾರಣಿಗಳು ಹಾಗೂ ಹುಸಿಸೆಕ್ಯುಲರ್‌ವಾದಿಗಳ ನಿರಾಕರಣೆ ಮತ್ತು ಮಾಧ್ಯಮದ ಒಂದು ವರ್ಗದ ಉದ್ದೇಶಪೂರ್ವಕ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹಾಗಾಗಿ ದೇಶದ ಉಳಿದ ಭಾಗಗಳಿಗೆ ಈ ಘಟನೆ ತಿಳಿದೇ ಇಲ್ಲ.

*2ನೇ ಪುಟಕ್ಕೆ*

### ಉತ್ತರ ಬಯಸುವ ಪ್ರಶ್ನೆಗಳು

**ಮಾಲ್ಡಾದಲ್ಲಾದ ಹಿಂಸಾಚಾರ ಒಂದಿಷ್ಟು ಗಂಭೀರ ಪ್ರಶ್ನೆಗಳನ್ನು ನಮ್ಮ ಮುಂದಿರಿಸುತ್ತದೆ.**

- **ಬಹುತೇಕ ಮುಸ್ಲಿಂ ಪ್ರತಿಭಟನೆಗಳು ಹಿಂಸಾತ್ಮಕ ದೊಂಬಿಗಳಾಗಿ ಯಾಕೆ ಪರ್ಯವಸಾನವಾಗುತ್ತವೆ?**
- **2012ರಲ್ಲಿ ಬರ್ಮಾದಲ್ಲಿ ಮುಸ್ಲಿಮರ ಮೇಲೆ ದೌರ್ಜನ್ಯವಾಗಿದೆಯೆಂದು ಮುಂಬೈನಲ್ಲಿ ಹಿಂಸಾಚಾರ ನಡೆಸಿ ಅಮರ ಜವಾನ ಪ್ರತಿಮೆಯನ್ನು ತುಳಿಯುವ ಮಟ್ಟಕ್ಕೆ ಇಳಿದದ್ದಾಗಲೀ, ಇನ್ನೆಲ್ಲೋ ಯೂರೋಪಿನಲ್ಲಿ ಪ್ರಕಟವಾದ ಕಾರ್ಟೂನಿಗಾಗಿ ಇಲ್ಲಿ ದೊಂಬಿ ನಡೆಸುವುದಾಗಲೀ, ಕೊಡಗಿನಲ್ಲಿ ಟಿಪ್ಪು ಜಯಂತಿಯ ಸಂದರ್ಭದ ಗಲಭೆಯಾಗಲೀ ಅಥವಾ ಇತ್ತೀಚಿನ ಮಾಲ್ಡಾದ ಹಿಂಸಾಚಾರವಾಗಲೀ ಎಲ್ಲೋ ನಡೆದ ಕ್ಷುಲ್ಲಕ ಕಾರಣ ಹಿಡಿದು ಸ್ಥಳೀಯ ಅಮಾಯಕ ಜನರನ್ನು ಗುರಿ ಮಾಡಿ ಗಲಭೆ ನಡೆಸುವುದು ಏಕೆ?**
- **ಆಜಂ ಖಾನನ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎನ್ನುವುದು ಬೇರೆ ವಿಷಯವಾದರೂ ಕಮಲೇಶ ತಿವಾರಿಯನ್ನು ಬಂಧಿಸಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ಮುಸ್ಲಿಂ ಪ್ರತಿಭಟನಾಕಾರರಿಗೆ ಈ ದೇಶದ ಕಾನೂನು ವ್ಯವಸ್ಥೆಯನ್ನು ಗೌರವಿಸುವ ಸಭ್ಯತೆಯೇಕಿಲ್ಲ?**
- **ಅನೇಕ ಅಪರಾಧ ಪ್ರಕರಣಗಳ ಸಂದರ್ಭದಲ್ಲಿ ಅಪರಾಧವೆಸಗಿದ ಮುಸ್ಲಿಮರ ಪರವಾಗಿ ಒಂದು ಗುಂಪು ಹಠಾತ್ ಒಂದುಗೂಡಿ ಪೊಲೀಸರ ಮೇಲೆ ಒತ್ತಡ ಹೇರುವುದು, ಕರ್ತವ್ಯ ನಿರತ ಪೊಲೀಸ್ ಅಧಿಕಾರಗಳ ಮೇಲೆ ಎರಗಿಬೀಳುವುದು, ಸಣ್ಣಪುಟ್ಟ ಜಗಳಗಳಲ್ಲಿ ಮುಸ್ಲಿಮನಾದರೆ ಆತನ ಬಲಕ್ಕೆ ತತ್‌ಕ್ಷಣದಲ್ಲಿ ದೊಡ್ಡಸಂಖ್ಯೆಯಲ್ಲಿ ಸೇರಿ ಇನ್ನೊಬ್ಬರ ಮೇಲೆ ಏರಿಹೋಗುವುದು ಇವೆಲ್ಲ ನಮ್ಮ ನಡುವೆ ನಡೆಯುತ್ತಿರುವ ಸಾಮಾನ್ಯ ಘಟನೆಗಳಾಗಿವೆ. ಯಾಕೆ ಹೀಗೆ?**
- **ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಇನ್ನೂ ಅಜ್ಞಾನ ಅಂಧಕಾರದಲ್ಲಿ ಕಳೆದು ಮತಬ್ಯಾಂಕ್ ರಾಜಕಾರಣದ ದಾಳಗಳಾಗಿ ತಾವು ಬಳಕೆಯಾಗುತ್ತಿದ್ದೇವೆ ಎನ್ನುವ ಸತ್ಯ ಮುಸ್ಲಿಂ ಸಮಾಜಕ್ಕೆ ಇನ್ನೂ ಏಕೆ ಅರಿವಾಗಿಲ್ಲ?**
- **ಮುಸ್ಲಿಂ ಸಮುದಾಯ ಯಾವ ದಿಕ್ಕಿನಲ್ಲಿ ನಡೆಯುತ್ತಿದೆ ಎನ್ನುವುದಕ್ಕೆ ಇಂತಹ ಗಲಭೆಗಳು ಹಿಡಿದ ಕನ್ನಡಿಯಾಗಿವೆ. ಇಂತಹ ಪ್ರಶ್ನೆಗಳಿಗೆ ಉಳಿದವರಿಗಿಂತ ಪ್ರಜ್ಞಾವಂತ ಮುಸಲ್ಮಾನರು ಉತ್ತರ ಕಂಡುಕೊಳ್ಳಬೇಕಾದ ಅನಿವಾರ್ಯತೆಯಿದೆ. ಏಕೆಂದರೆ ಸುಸಂಸ್ಕೃತ ಸಮಾಜ ಎಂದಿಗೂ ಇಂತಹ ಅನಾಗರಿಕತೆಯನ್ನು ಒಪ್ಪಿಕೊಳ್ಳದು.**

1ನೇ ಪುಟದಿಂದ

## ಮಾಲ್ಡಾ: ಮುಸ್ಲಿಂ ದೌರ್ಜನ್ಯಕ್ಕೊಳಗಾದ ಇನ್ನೊಂದು ಕಾಶ್ಮೀರ

**ನಡೆದದ್ದಿಷ್ಟು**

ದೊಂಬಿಯ ಕಿಡಿ ಹೊತ್ತಿದ್ದು ಒಂದೂವರೆ ತಿಂಗಳ ಹಿಂದೆ. ಸಲಿಂಗಕಾಮವನ್ನು ಅಪರಾಧವೆಂದು ಪರಿಗಣಿಸುವ ಭಾರತೀಯ ದಂಡಸಂಹಿತೆಯ 377ನೇ ಕಲಂನ ಕುರಿತಂತೆ ಕೇಂದ್ರ ಸಚಿವ ಅರುಣ ಜೇಟ್ಲಿ ಹೇಳಿದ್ದಕ್ಕೆ ಅನಗತ್ಯ ಪ್ರತಿಕ್ರಿಯೆ ನೀಡಿದ ಉತ್ತರಪ್ರದೇಶ ರಾಜ್ಯದ ಮಂತ್ರಿ ಆಜಂ ಖಾನ್ ಹಿಂದೂ ನಾಯಕರ ವಿರುದ್ಧ ಸಲಿಂಗಕಾಮದ ಆರೋಪ ಹೊರಿಸಿ ಗೇಲಿಮಾಡಿದ. ಆಜಂಖಾನನ ಧೂರ್ತತೆಯ ಅರಿವಿದ್ದ ಯಾರೂ ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಉತ್ತರ ಪ್ರದೇಶದ ಸೀತಾಪುರದ ನಿವಾಸಿ, ಹಿಂದೂ ಮಹಾಸಭಾದ ನಾಯಕನೆಂದು ಸ್ವಯಂಘೋಷಿತ ಕಮಲೇಶ ತಿವಾರಿ ಎನ್ನುವ ವ್ಯಕ್ತಿ ಪ್ರವಾದಿ ಮಹಮ್ಮದ ಸಲಿಂಗಕಾಮಿ ಎನ್ನುವ ರೀತಿಯಲ್ಲಿ ಹೇಳಿಕೆ ನೀಡಿದ ಆರೋಪ ಕೇಳಿಬಂತು. ಇದು ಮುಸಲ್ಮಾನರ ಮತೀಯ ಭಾವನೆಗೆ ಧಕ್ಕೆ ಎಂದು ವಿರೋಧಿಸಿ ಉತ್ತರ ಪ್ರದೇಶ ರಾಜ್ಯದ ಅನೇಕ ಕಡೆಗಳಲ್ಲಿ ಮುಸ್ಲಿಮರು ತೀವ್ರ ಪ್ರತಿಭಟನೆ ನಡೆಸಿದರು. ಅನೇಕಕಡೆ ಪ್ರತಿಭಟನೆ ಹಿಂಸಾತ್ಮಕ ರೂಪ ಪಡೆದಿತ್ತು. ಕಮಲೇಶ ತಿವಾರಿಯನ್ನು ಗಲ್ಲಿಗೇರಿಸಬೇಕೆಂದು ಒತ್ತಾಯಿಸಲಾಯಿತು. ಕಮಲೇಶ ತಿವಾರಿಯ ತಲೆತೆಗೆದವರಿಗೆ ರೂ. 50 ಲಕ್ಷಗಳ ಬಹುಮಾನದ ಫತ್ವಾ ಕೂಡ ಮೌಲ್ವಿಗಳಿಂದ ಹೊರಬಿತ್ತು. ಇತರ ರಾಜ್ಯಗಳಲ್ಲೂ ಪ್ರತಿಭಟನೆಗಳು ನಡೆದವು. ಮತೀಯ ಗುಂಪುಗಳ ಮಧ್ಯೆ ದ್ವೇಷ ಬಿತ್ತುವ ಮತ್ತು ಮತೀಯ ಭಾವನೆಗಳನ್ನು ಕೆರಳಿಸುವ ಆರೋಪದ ಮೇಲೆ ಕಮಲೇಶ ತಿವಾರಿಯನ್ನು ಬಂಧಿಸಲಾಯಿತು. ಆದರೆ ಆಜಂ ಖಾನನ ಮೇಲೆ ಇದುವರೆಗೂ ಯಾವ ಕ್ರಮವನ್ನೂ ಜರುಗಿಸಲಾಗಿಲ್ಲ.

ಇದಾದ ಒಂದು ತಿಂಗಳ ನಂತರ 2016 ಜನವರಿ 3ರಂದು ಮಾಲ್ಡಾ ಜಿಲ್ಲೆಯ ಕಲಿಯಾಚಕ್‌ನಲ್ಲಿ ಇದಾರ–ಎ_ಶರಿಯಾ ಮತ್ತು ಅಂಜುಮನ್ ಆಹ್ಲೆ ಸುನ್ನಾತುಲ್ ಜಮಾತ್ ಎಂಬ ಹೆಸರಿನ ಮುಸ್ಲಿಂ ಸಂಘಟನೆಗಳು ಕಮಲೇಶ ತಿವಾರಿಗೆ ಗಲ್ಲುಶಿಕ್ಷೆ ನೀಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದವು. ಪ್ರತ್ಯಕ್ಷದರ್ಶಿಗಳ ಅಂದಾಜಿನಂತೆ 30 ಸಾವಿರದಿಂದ 2.5ಲಕ್ಷ ಜನ ಮುಸ್ಲಿಮರು ಒಂದುಗೂಡಿದ್ದ ಈ ಪ್ರತಿಭಟನೆ ಹಿಂಸೆಯ ರೂಪ ಪಡೆಯಿತು. ಸುತ್ತಲಿನ ಹಿಂದೂ ಮನೆಗಳ ಮೇಲೆ ದಾಳಿ ನಡೆಯಿತು ಮಹಿಳೆಯರು ಮಕ್ಕಳು ಸೇರಿದಂತೆ ಅನೇಕರ ಮೇಲೆ ಹಿಂಸಾಚಾರ ನಡೆಯಿತು. ರಾಷ್ಟ್ರೀಯ ಹೆದ್ದಾರಿ 34ರಲ್ಲಿ ತಡೆಗಟ್ಟಲಾಯಿತು, ಸರ್ಕಾರಿ ಬಸ್ ಬಿಎಸ್‌ಎಫ್ ವಾಹನಗಳು, ಅನೇಕ ಖಾಸಗೀ ವಾಹನಗಳು ಅಂಗಡಿ ಮುಂಗಟ್ಟುಗಳು ಬೆಂಕಿಗೆ ಆಹುತಿಯಾದವು. ಹತ್ತಿರದ ಶನೀಶ್ವರ ದೇವಸ್ಥಾನ, ದುರ್ಗಾ ದೇವಸ್ಥಾನಗಳು ಗಲಭೆಕೋರರ ದಾಳಿಗೆ ತುತ್ತಾದವು. ಕಾಲಿಯಾಚಕ್‌ನ ಪೊಲೀಸ್ ಠಾಣೆಯನ್ನು ಧ್ವಂಸಗೊಳಿಸಿದ ಪುಂಡರು ಅಲ್ಲಿನ ದಾಖಲೆಗಳನ್ನೆಲ್ಲ ನಾಶಪಡಿಸಿದರು. ಅಸಹಾಯಕ ಪೊಲೀಸರು ತಮ್ಮ ಪ್ರಾಣರಕ್ಷಣೆಗಾಗಿ ಹತ್ತಿರದ ಮನೆಗಳಲ್ಲಿ ಅಡಗಬೇಕಾಯಿತು.

ಇಷ್ಟೆಲ್ಲ ಆದರೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಇದು ಕೇವಲ ಸ್ಥಳೀಯರು ಮತ್ತು ಬಿಎಸ್‌ಎಫ್‌ನ ನಡುವೆ ನಡೆದ ಸಣ್ಣ ಸಂಘರ್ಷ ಎಂದು ತೇಪೆ ಹಾಕುವ ಪ್ರಯತ್ನ ಮಾಡಿದರು. ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಬಂಗಾಳ ಮತ್ತು ಆಸ್ಸಾಂಗಳಲ್ಲಿ ಬಾಂಗ್ಲಾದೇಶದ ಮುಸ್ಲಿಂ ನುಸುಳುಕೋರರು ಮತ್ತು ಅಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಮೂಲಭೂತವಾದಿಗಳಿಂದ ಆಗಾಗ ಕೋಮುದಳ್ಳುರಿ ಹತ್ತುತ್ತಿರುವುದು ತಿಳಿದಿರುವ ವಿಷಯ. ಹಾಗೆಯೇ ಈ ಎರಡೂ ರಾಜ್ಯಗಳು ಚುನಾವಣೆಯ ಹೊಸ್ತಿಲಲ್ಲಿ ನಿಂತಿವೆ. ಈ ಹಿನ್ನೆಲೆಯಲ್ಲಿ ವೋಟ್‌ಬ್ಯಾಂಕ್ ರಾಜಕಾರಣಕ್ಕಾಗಿ ದೇಶದ ಸುರಕ್ಷತೆಯೊಂದಿಗೂ ರಾಜಿ ಮಾಡಿಕೊಳ್ಳುವ ನೀತಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗಿದೆ.

## ಉತ್ತರಾಖಂಡದ ದೇವಸ್ಥಾನ ದಲಿತರು, ಮಹಿಳೆಯರಿಗೆ ಮುಕ್ತ

ಉತ್ತರಾಖಂಡದ ಗಢವಾಲ್‌ನ ಜೌನ್ಸಾರ್ ಬವಾರ್ ವಲಯದ ಪರಶುರಾಮ ದೇವಸ್ಥಾನವು ತನ್ನ 400 ವರ್ಷಗಳಷ್ಟು ಹಳೆಯ ಪರಂಪರೆಯನ್ನು ಮುರಿದು ಮಹಿಳೆಯರು ಮತ್ತು ದಲಿತರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ನೀಡಿದೆ.

ಪರಶುರಾಮ ದೇವಸ್ಥಾನದಲ್ಲಿ ಇಷ್ಟು ದಿನ ದಲಿತರು ಮತ್ತು ಮಹಿಳೆಯರಿಗೆ ಪ್ರವೇಶವೇ ಇರಲಿಲ್ಲ. ಸಂಪ್ರದಾಯದಂತೆ ಇದನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಂಡು ಬರಲಾಗಿತ್ತು. ಆದರೆ ಈಗ ಆಡಳಿತ ಮಂಡಳಿ ನಿಷೇಧಕ್ಕೆ ಕಡಿವಾಣ ಹಾಕಿ, ಮುಂಬರುವ ದಿನಗಳಲ್ಲಿ ಎಲ್ಲರಿಗೂ ಸಮನಾದ ಪ್ರವೇಶಾವಕಾಶ ಇರುವುದಾಗಿ ಪ್ರಕಟಿಸಿದೆ.


## ಸರ್ಕಾರಿ ಶಾಲಾ ವಿದ್ಯಾರ್ಥಿಗೆ 'ಬಾಲ ವಿಜ್ಞಾನಿ' ಪ್ರಶಸ್ತಿ



ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳು ಸ್ವಲ್ಪ ಅವಕಾಶ ದೊರೆತರೆ ಹಲವು ಸಾಧನೆಗಳನ್ನು ಮಾಡಬಲ್ಲರು. ಈ ವಿಷಯ ಹಲವಾರು ನಿದರ್ಶನಗಳಲ್ಲಿ ಸಾಬೀತಾಗಿದೆ. ಈಗ ಮತ್ತೊಬ್ಬ ಬಾಲಕ ತನ್ನ ಪ್ರತಿಭೆಯಿಂದ ಅಚ್ಚರಿಯ ಸಾಧನೆ ಮಾಡಿ ರಾಷ್ಟ್ರಮಟ್ಟದ 'ಬಾಲ ವಿಜ್ಞಾನಿ' ಪ್ರಶಸ್ತಿ ಪಡೆದಿದ್ದಾನೆ.

ಅಸ್ಸಾಂನ ಜೋಹ್ರತ್‌ನಲ್ಲಿ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 13 ವರ್ಷದ ಮುಸ್ತಫಾ ಅಹಮದ್ ಧಾನ್ಯಗಳನ್ನು ಶೇಖರಿಸುವ ವಿನೂತನ ವಿಧಾನವನ್ನು ಆವಿಷ್ಕರಿಸಿದ್ದು, ಇದಕ್ಕಾಗಿ ರಾಷ್ಟ್ರಮಟ್ಟದ 'ಬಾಲ ವಿಜ್ಞಾನಿ' ಪ್ರಶಸ್ತಿ ಪಡೆದುಕೊಂಡಿದ್ದಾನೆ. ಚಂಡೀಗಢ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ 23ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಕಾಂಗ್ರೆಸ್ (ಎನ್‌ಸಿಎಸ್‌ಸಿ) ನಲ್ಲಿ ಮುಸ್ತಫಾ ಸಂಶೋಧಿಸಿರುವ ಧಾನ್ಯ ಶೇಖರಣಾ ವಿಧಾನಕ್ಕೆ ಪ್ರಶಸ್ತಿ ದೊರೆತಿದೆ. ಈ ಮೂಲಕ ಇದೇ ಮೊದಲ ಬಾರಿಗೆ ಸರ್ಕಾರಿ ಶಾಲೆಯಲ್ಲಿ ಓದುವ ವಿದ್ಯಾರ್ಥಿಯೊಬ್ಬ ಮಕ್ಕಳ ವಿಜ್ಞಾನ ಕಾಂಗ್ರೆಸ್‌ನಲ್ಲಿ ಪ್ರಶಸ್ತಿ ಪಡೆದಿದ್ದಾನೆ. ಧಾನ್ಯ ಶೇಖರಣೆಯ ಸಂದರ್ಭದಲ್ಲಿ ಸಾಕಷ್ಟು ಧಾನ್ಯ ಹಾಳಾಗುತ್ತದೆ. ಇದರಿಂದ ರೈತರಿಗೆ ನಷ್ಟವುಂಟಾಗುತ್ತದೆ. ಧಾನ್ಯದ ಮೇಲೆ ಬ್ಯಾಕ್ಟೀರಿಯಾ ಬೆಳವಣಿಗೆಯಾಗುವುದು ಇದಕ್ಕೆ ಪ್ರಮುಖ ಕಾರಣ. ಜತೆಗೆ ಕೀಟಬಾಧೆಯಿಂದಲೂ ಸಹ ಧಾನ್ಯ ಹಾಳಾಗುತ್ತದೆ. ಹಾಗಾಗಿ ಶೇಖರಣೆಯ ಸಂದರ್ಭದಲ್ಲಿ ಬ್ಯಾಕ್ಟೀರಿಯಾ ಬೆಳವಣಿಗೆ ಮತ್ತು ಕೀಟಬಾಧೆ ತಡೆಯುವ ವಿಧಾನವನ್ನು ಮುಸ್ತಫಾ ಸಂಶೋಧಿಸಿದ್ದಾನೆ.

## ಪ್ರತಿ ಗ್ರಾಮದಲ್ಲೂ ರಾಮ ಮಂದಿರ: ವಿಹಿಂಪ



ಸಂಸತ್ತಿನಲ್ಲಿ ಕಾನೂನು ರೂಪಿಸಿ ಶಾಂತಿಯುತವಾಗಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವ ವಿಶ್ವ ಹಿಂದು ಪರಿಷತ್ ಈಗ ಮತ್ತೊಂದು ಮಹತ್ವದ ಯೋಜನೆಯನ್ನು ಘೋಷಿಸಿದೆ. ದೇಶದ ಎಲ್ಲ ಗ್ರಾಮಗಳಲ್ಲಿ ರಾಮಮಂದಿರ ನಿರ್ಮಿಸಲಾಗುವುದು ಎಂದು ವಿಹಿಂಪ ತಿಳಿಸಿದೆ. ರಾಮ ನವಮಿ ನಿಮಿತ್ತ ಏ. 15ರಿಂದ ಏಳು ದಿನಗಳ ಕಾಲ ರಾಮ ಮಹೋತ್ಸವ ಕಾರ್ಯಕ್ರಮವನ್ನು ದೇಶದಾದ್ಯಂತ ಹಮ್ಮಿಕೊಳ್ಳಲಾಗುವುದು. ಈಗಾಗಲೇ ದೇಶಾದ್ಯಂತ ಸುಮಾರು 75 ಸಾವಿರ ಗ್ರಾಮಗಳಲ್ಲಿ ರಾಮ ನವಮಿ ಉತ್ಸವ ಆಚರಿಸಲಾಗುತ್ತಿದೆ. ಈ ವರ್ಷ 1.5 ಲಕ್ಷ ಗ್ರಾಮಗಳಲ್ಲಿ ಈ ಕಾರ್ಯಕ್ರಮ ಆಯೋಜಿಸುವ ಗುರಿ ಹೊಂದಲಾಗಿದೆ. ಈ ವೇಳೆ ಶ್ರೀರಾಮನ ವಿಗ್ರಹ ಅಥವಾ ಭಾವಚಿತ್ರ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲಾಗುವುದು. ಗ್ರಾಮಗಳಲ್ಲಿ ರಾಮಮಂದಿರ ನಿರ್ಮಿಸುವ ಪ್ರಕ್ರಿಯೆಯನ್ನೂ ಆರಂಭಿಸಲಾಗುವುದು ಎಂದು ವಿಹಿಂಪ ತಿಳಿಸಿದೆ.

ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳಿಗೆ ದೇಶದ ಸಮಗ್ರ ಕಲ್ಪನೆ ಮೂಡಿಸುವ ಉದ್ದೇಶದಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನಡೆಸಿಕೊಂಡು ಬರುತ್ತಿರುವ ಅಂತರರಾಜ್ಯ ವಿದ್ಯಾರ್ಥಿ ಜೀವನಾನುಭವ ಕಾರ್ಯಕ್ರಮದಡಿ ಈಶಾನ್ಯ ರಾಜ್ಯದ 30 ವಿದ್ಯಾರ್ಥಿಗಳು ಬೆಂಗಳೂರು ಸಮೀಪದ ದೇವನಹಳ್ಳಿ ಬಳಿಯ ಹಿರೇಹಳ್ಳಿಯಲ್ಲಿ ಸಂಕ್ರಾಂತಿ ಹಬ್ಬವನ್ನು ಆಚರಿಸಿದರು. 7 ರಾಜ್ಯಗಳಿಂದ ಆಗಮಿಸಿರುವ 30 ವಿದ್ಯಾರ್ಥಿಗಳು ಭಾರತದ ಇತರ ಭಾಗಗಳ ಪರಿಚಯ ಮಾಡಿಕೊಳ್ಳುವ ಸಲುವಾಗಿ ಕರ್ನಾಟಕ ಪ್ರವಾಸ ಮಾಡಿದರು. ಬೆಂಗಳೂರಿನ 16 ಮನೆಗಳಲ್ಲಿ ತಲಾ ಇಬ್ಬರು ವಿದ್ಯಾರ್ಥಿಗಳಿಗೆ ವಾಸ್ತವ್ಯ ಕಲ್ಪಿಸಲಾಗಿತ್ತು.



## ಇಲ್ಲಿ ಎಲ್ಲವೂ ನೈಸರ್ಗಿಕ




ಇವರ ಬಳಿ ಇರುವುದು ಕೇವಲ 29 ಗುಂಟೆ ಜಾಗ. ಆದರೆ ಅದರಲ್ಲಿಯೇ ಎಕರೆಗಟ್ಟಲೆ ಜಮೀನನ್ನು ಮೀರಿಸುವಷ್ಟು 'ನೈಸರ್ಗಿಕ' ಫಸಲು ತುಂಬಿ ಹೋಗಿವೆ. ತೆಂಗು, ಅಡಿಕೆ, ಏಲಕ್ಕಿ, ಮೆಣಸು, ಮೂಸಂಬಿ, ಕಾಫಿ, ವೀಳ್ಯದೆಲೆ, ದಾಲ್ಚಿನ್ನಿ, ಅರಿಶಿಣ, ಚಕ್ಕೋತ, ಪನ್ನೀರು, ಹಲಸು, ಕಿತ್ತಳೆ... ಹೀಗೆ ಹತ್ತು ಹಲವಾರು ಬಗೆಯ ಬೆಳೆಗಳು ಅಲ್ಲಿವೆ.

ಇಂಥ ವೈವಿಧ್ಯಮಯ ಬೆಳೆಗಳನ್ನು ನೋಡಬೇಕೆಂದರೆ ಮಂಡ್ಯದ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ರೈತ ಬಸವರಾಜು ಅವರ ತೋಟಕ್ಕೆ ಬರಬೇಕು. ನೈಸರ್ಗಿಕ ಕೃಷಿಕ ಸುಭಾಷ ಪಾಳೇಕರ್ ಅವರ ಕೃಷಿ ಪರಿಕಲ್ಪನೆಯನ್ನು ತಮ್ಮ ತೋಟಕ್ಕೆ ಅಳವಡಿಸಿಕೊಂಡು ಲಾಭದತ್ತ ಮುಖಮಾಡಿದ್ದಾರೆ ಬಸವರಾಜು. ಅಸಂಖ್ಯ ರೈತರ ಆತ್ಮಹತ್ಯೆಯಿಂದಾಗಿ, ಆತ್ಮಹತ್ಯೆ ನಗರಿ ಎಂದೇ ಕಪ್ಪು ಚುಕ್ಕೆಗೆ ಒಳಗಾಗಿರುವ ಮಂಡ್ಯದ ರೈತರಿಗೆ ಇವರು ಮಾದರಿ ಎಂದರೆ ತಪ್ಪಾಗಲಿಕ್ಕಿಲ್ಲ.

ಸ್ವಲ್ಪವೂ ರಾಸಾಯನಿಕವನ್ನು ಭೂಮಿಗೆ ಸೋಕಿಸದ ಬಸವರಾಜು ಅವರು ವಿವಿಧ ಬೆಳೆಗಳನ್ನು ಬೆಳೆದಿದ್ದಾರೆ. ಆ ಪೈಕಿ ಹದಿನೈದು ಬಗೆಯ ಬೆಳೆಗಳು ಭರಪೂರ ಫಲ ನೀಡಿವೆ. ಈ ಬೆಳೆಗಳಿಗೆ ಪೂರಕವಾಗಿ ತೋಟದ ನಡುವೆ ಜೇನು ಸಾಕಣೆ ಕೂಡ ಮಾಡಿ ಅದರಲ್ಲಿಯೂ ಸಾಕಷ್ಟು ಲಾಭ ಗಳಿಸುತ್ತಿದ್ದಾರೆ.

'ಮೊದಲು ಎಲ್ಲರಂತೆಯೇ ನಾನೂ ರಾಸಾಯನಿಕದ ಮೊರೆ ಹೋದವನೇ. ಸುಮಾರು ಹತ್ತು ವರ್ಷಗಳ ಹಿಂದೆ ಪುತ್ತೂರಿನಲ್ಲಿ ರಾಜ್ಯ ರೈತ ಸಂಘ ಸುಭಾಷ್ ಪಾಳೇಕರ್ ಅವರ ನೈಸರ್ಗಿಕ ಬೇಸಾಯದ ಕಾರ್ಯಾಗಾರ ಏರ್ಪಡಿಸಿತ್ತು. ಅದರಿಂದ ಪ್ರೇರಿತನಾಗಿ ನಾನು ಅಂದೇ ಒಂದು ದೇಶಿ ಹಸು ಖರೀದಿಸಿದೆ. ಆ ದಿನವೇ ರಾಸಾಯನಿಕ ಗೊಬ್ಬರಗಳಿಗೆ ವಿದಾಯ ಹೇಳಿದೆ. ಅಂದಿನಿಂದ ಶುರುವಾದ ನನ್ನ ನೈಸರ್ಗಿಕ ಕೃಷಿ ಕಾರ್ಯ ಇಂದು ಇಂಥ ಉತ್ತಮ ಸ್ಥಿತಿಗೆ ತಂದು ನಿಲ್ಲಿಸಿದೆ' ಎಂದು ಹೇಳುತ್ತಾರೆ ಬಸವರಾಜು.

'ಬಯಲು ಸೀಮೆ ಮಂಡ್ಯದ ನೆಲದಲ್ಲಿ ಒಂದೇ ಬೆಳೆ ನೆಚ್ಚಿಕೊಂಡು ಹತಾಶರಾಗುವುದು ಸರಿಯಲ್ಲ. ಮಿಶ್ರ ಬೆಳೆ ಬೇಸಾಯ ಪದ್ಧತಿಯಿಂದ ಒಂದಲ್ಲಾ ಒಂದು ಬೆಳೆಯಿಂದ ಲಾಭಗಳಿಸಬಹುದು. ಇದರಿಂದ ಆರ್ಥಿಕವಾಗಿ ಸದೃಢರಾಗಬಹುದು' ಎಂದು ಅವರು ಕಿವಿಮಾತು ಹೇಳುತ್ತಾರೆ. ತಮ್ಮ ತೋಟದಲ್ಲಿ ದೊರೆಯುವ ತೆಂಗಿನ ಕಾಯಿಗಳನ್ನು ಪಾಂಡವಪುರ ಸಂತೆಯಲ್ಲಿ ಮಾರುತ್ತಾರೆ, ಅಡಿಕೆಯನ್ನು ಗೋಟು ಮಾಡಿ ಮಂಗಳೂರಿಗೆ ಹೋಗಿ ಮಾರಾಟ ಮಾಡುತ್ತಾರೆ. ಕಳೆದ ವರ್ಷದಿಂದ ಏಲಕ್ಕಿ ಬೆಳೆ ಬಂದು ಅದನ್ನು ಮೈಸೂರಿನ ಸಾವಯವ ಅಂಗಡಿಗೆ ಪ್ರತಿ ಕೆ.ಜಿ.ಗೆ 1800 ರಂತೆ ಮಾರಾಟ ಮಾಡಿದ್ದಾರೆ. ಮೆಣಸು ಮತ್ತು ಹಣ್ಣುಗಳು ಸದ್ಯಕ್ಕೆ ಮನೆ ಬಳಕೆಗಾದರೆ ಇತರೆ ಕೃಷಿ ಉತ್ಪನ್ನಗಳನ್ನು ದಲ್ಲಾಳಿಗಳ ಮೂಲಕ ಮಾರದೆ ನೇರ ಮಾರಾಟ ಮಾಡುವುದರಿಂದ ಹೆಚ್ಚು ಲಾಭ ಪಡೆದುಕೊಳ್ಳುತ್ತಿದ್ದಾರೆ.

ತಮ್ಮ ಜಮೀನಿನಲ್ಲೇ ಜೀವಾಮೃತ ತಯಾರಿಸುತ್ತಾರೆ. ಮನೆ ಮತ್ತು ಗದ್ದೆಗೆ ತಿರುಗಾಡಲು ಒಂಟೆತ್ತಿನ ಗಾಡಿ ಇಟ್ಟುಕೊಂಡಿದ್ದಾರೆ. ಅಲ್ಲದೆ ತಮ್ಮ ಜಮೀನು ಉಳುಮೆಗೆ ಬರೀ ಒಂಟಿ ಎತ್ತನ್ನೇ ಬಳಸುತ್ತಾರೆ, ತಮ್ಮ ತೋಟದ ಬಹುತೇಕ ಎಲ್ಲಾ ಕೆಲಸವನ್ನು ಅವರೇ ಮಾಡಿಕೊಳ್ಳುತ್ತಾರೆ, ಹೆಚ್ಚಿನ ಕೆಲಸವಿದ್ದಾಗ ಮಾತ್ರ ಕೂಲಿ ಆಳುಗಳನ್ನು ಅವಲಂಬಿಸುತ್ತಾರೆ. ವಾರ್ಷಿಕವಾಗಿ ತೋಟದ ಖರ್ಚು ರೂ. 20 ಸಾವಿರ ಬರುತ್ತಿದ್ದರೆ, ಲಾಭ ಒಂದೂವರೆ ಲಕ್ಷ ಎಂದು ಲೆಕ್ಕಾಚಾರ ವಿವರಿಸುತ್ತಾರೆ ಬಸವರಾಜು.

**ಕೀಟ ನಿಯಂತ್ರಣಕ್ಕೆ...** : ಬೆಳೆಗಳಿಗೆ ತಗಲುವ ಕೀಟಗಳ ನಿಯಂತ್ರಣಕ್ಕೆ ಬೇವು, ಹಾಗಲಕಾಯಿ, ವೀಳ್ಯದೆಲೆ, ಹೊಂಗೆ, ಸೀಬೆ, ಸೀತಾಫಲ, ದತ್ತೂರಿ ಹಾಗೂ ಪರಂಗಿ ಎಲೆಗಳನ್ನು ಒನಕೆಯಲ್ಲಿ ಕುಟ್ಟಿ, ಕೊಳೆಸಿ ಅದಕ್ಕೆ ನಾಟಿ ಹಸುವಿನ ಮಜ್ಜಿಗೆ ಜೊತೆ ಜೀವಾಮೃತ ಸೇರಿಸಿ ರೋಗ ಪೀಡಿತ ಗಿಡಗಳಿಗೆ ಸಿಂಪಡಿಸುತ್ತಾರೆ. ತಿಂಗಳಿಗೆ ನಾಲ್ಕು ಬಾರಿ ಮಾತ್ರ ನೀರು ಹರಿಸುತ್ತಾರೆ. ಇವರ ತೋಟದಲ್ಲಿ ತೆಂಗು, ಅಡಿಕೆ ಫಲಕಚ್ಚಿ ತೂಗಾಡುತ್ತಿವೆ. ಏಲಕ್ಕಿ ಜೊಂಪೆ–ಜೊಂಪೆಯಾಗಿ ತೂಗುತ್ತ ಭಾರಕ್ಕೆ ಭೂಮಿಯ ಮೇಲೆ ಮಲಗಿದಂತೆ ಕಾಣಿಸುತ್ತದೆ. ಇಡೀ ತೋಟವನ್ನು ಕಳೆ ಇಲ್ಲದೆ ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದಾರೆ.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನುಭಾಗ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ, ಶ್ರೀಪಾದ ಹೆಚ್.ಎಸ್, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



# ಪಂಪಾ ನದಿ ಸ್ವಚ್ಛತೆಗೆ ಸಂಕಲ್ಪ

ಪದ್ಧತಿಯಂತೆ ತಮ್ಮ ಬಳಸಿದ ಬಟ್ಟೆಗಳನ್ನು ಪಂಪಾ ನದಿಗೆ ಎಸೆಯುವುದಿಲ್ಲ ಮತ್ತು ಪಂಪಾ ನದಿಯನ್ನು ಸ್ವಚ್ಛವಾಗಿ ಇರಿಸುತ್ತೇವೆ ಎಂದು ಎರಡು ಲಕ್ಷಕ್ಕೂ ಹೆಚ್ಚು ಜನರು ಪ್ರಸಿದ್ಧ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಸಂಕಲ್ಪ ಮಾಡಿದ್ದಾರೆ. 'ಹಸಿರು ಶಬರಿಮಲೆ' ಎಂಬ ಅಭಿಯಾನದ ಭಾಗವಾಗಿ ಇಂತಹ ಸಂಕಲ್ಪ ಪತ್ರಕ್ಕೆ ಜನರ ಸಹಿ ಮಾಡಿಸಲಾಗುತ್ತಿದ್ದು ಅದನ್ನು ಲಿಮ್ಕಾ ದಾಖಲೆಗೆ ಸೇರಿಸುವ ಉದ್ದೇಶವೂ ಇದೆ. ಕನ್ನಡ, ಮಲಯಾಳ, ತಮಿಳು, ತೆಲುಗು, ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಈ ಸಂಕಲ್ಪ ಪತ್ರವನ್ನು ಸಿದ್ಧಪಡಿಸಲಾಗಿದೆ. ಪಂಪಾ ನದಿಗೆ ಬಟ್ಟೆಯನ್ನು ಎಸೆಯುವುದಿಲ್ಲ, ಅದನ್ನು ಕಸದ ಬುಟ್ಟಿಗೆ ಹಾಕುತ್ತೇನೆ ಎಂದು ಸಂಕಲ್ಪ ಪತ್ರದಲ್ಲಿ ಬರೆಯಲಾಗಿದೆ.

ಶಬರಿಮಲೆಗೆ ಬರುವ ಎಲ್ಲ ಭಕ್ತರೂ ಪಂಪಾ ನದಿಯಲ್ಲಿ ಸ್ನಾನ ಮಾಡುತ್ತಾರೆ. ಹಾಗಾಗಿ ನದಿಯನ್ನು ಸ್ವಚ್ಛವಾಗಿ ಇರಿಸುವುದು ಬಹಳ ಮುಖ್ಯ. ಪಂಪಾ ನದಿಯಲ್ಲಿ ಸ್ನಾನ ಮಾಡಿದ ಬಳಿಕ ಬಟ್ಟೆಯನ್ನು ನದಿಗೆ ಎಸೆಯಬೇಕು ಎಂಬ ನಂಬಿಕೆ ಇದೆ. ಆದರೆ ಇದು ಸಂಪ್ರದಾಯ ಅಲ್ಲ. ಹಾಗಾಗಿ ಇದರ ವಿರುದ್ಧ ಜನರು ಸಂಕಲ್ಪ ಮಾಡುವಂತೆ ಮನವೊಲಿಸಲು ಪ್ರತಿ ದಿನ 10 ಸ್ವಯಂಸೇವಕರನ್ನು ನಿಯೋಜಿಸಲಾಗುತ್ತಿದೆ. ಕಳೆದ ವರ್ಷ 8,750 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ಶಬರಿಮಲೆಯಲ್ಲಿ ಸಂಗ್ರಹವಾಗಿತ್ತು. ಅದರಲ್ಲಿ ನೀರಿನ ಬಾಟಲಿ, ಆಹಾರದ ಪ್ಯಾಕೆಟ್‌ಗಳು, ಚೀಲಗಳು ಸೇರಿದ್ದವು. 1,500 ವರ್ಷ ಹಳೆಯ ದೇವಾಲಯ ಪೆರಿಯಾರ್ ಅಭಯಾರಣ್ಯದೊಳಗೆ ಇದೆ. ಜನರು ಬಿಸಾಕುವ ಪ್ಲಾಸ್ಟಿಕ್ ಇಲ್ಲಿನ ಪರಿಸರಕ್ಕೆ ದೊಡ್ಡ ಅಪಾಯವಾಗಿ ಪರಿಣಮಿಸಿದೆ ಎಂದು ಪತ್ತನಂತಿಟ್ಟ ಜಿಲ್ಲಾಧಿಕಾರಿ ತಿಳಿಸಿದ್ದಾರೆ.



ಪಂಪಾ ನದಿಯ ಸ್ವಚ್ಛತಾ ಕಾರ್ಯದಲ್ಲಿ ಆರೆಸ್ಸೆಸ್ ಸ್ವಯಂಸೇವಕರು

# ನಾಲುದ್ದದ ಸುದ್ದಿಗಳು

ಭಾರತ ಮತ್ತು ಪಾಕಿಸ್ತಾನ ನಡುವಿನ ಅಂತರರಾಷ್ಟ್ರೀಯ ಗಡಿ ಉಲ್ಲಂಘನೆಯಾಗದಂತೆ ಎಚ್ಚರಿಕೆ ವಹಿಸಲು ಗಡಿಯಲ್ಲಿ ಲೇಸರ್ ವಾಲ್ (ಗೋಡೆ) ನಿರ್ಮಾಣಕ್ಕೆ ಕೇಂದ್ರ ಗೃಹ ಇಲಾಖೆ ಮುಂದಾಗಿದೆ. 40 ಕ್ಕೂ ಹೆಚ್ಚು ಅತಿ ಸೂಕ್ಷ್ಮ ಗಡಿ ಪ್ರದೇಶಗಳಲ್ಲಿ ಲೇಸರ್ ವಾಲ್ ನಿರ್ಮಾಣ ಮಾಡಲಾಗುವುದು ಎಂದು ಗೃಹ ಇಲಾಖೆ ತಿಳಿಸಿದೆ. ಬಿಎಸ್‌ಎಫ್ ಲೇಸರ್ ವಾಲ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದು, ಇದರಿಂದ ಗಡಿಯಲ್ಲಿ ಯಾವುದೇ ವ್ಯಕ್ತಿ ಭಾರತಕ್ಕೆ ನುಸುಳುವುದನ್ನು ಸಮರ್ಥವಾಗಿ ಪತ್ತೆ ಹಚ್ಚಬಹುದು ಎನ್ನಲಾಗಿದೆ.



**ಬಾಂಗ್ಲಾದೇಶ ವಿಮೋಚನೆಗಾಗಿ ಪಾಕಿಸ್ತಾನ ವಿರುದ್ಧ 1971ರಲ್ಲಿ ನಡೆದ ಯುದ್ಧದಲ್ಲಿ ಭಾರತಕ್ಕೆ ಗೆಲುವು ತಂದುಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ನಿವೃತ್ತ ಲೆಫ್ಟಿನೆಂಟ್ ಜನರಲ್ ಜೆ.ಎಫ್.ಆರ್ ಜೇಕಬ್ (92) ಇತ್ತೀಚೆಗೆ ನಿಧನರಾಗಿದ್ದಾರೆ. ಬ್ರಿಟಿಷ್ ಆಡಳಿತವಿದ್ದ ಬಂಗಾಳ ಪ್ರೆಸಿಡೆನ್ಸಿಯಯಲ್ಲಿ ಜೇಕಬ್ 1923ರಲ್ಲಿ ಜನಿಸಿದ್ದರು. ತಮ್ಮ 19ನೇ ವಯಸ್ಸಿನಲ್ಲೇ ಸೇನೆಗೆ ಸೇರಿದ್ದ ಅವರು 2ನೇ ವಿಶ್ವಯುದ್ಧದಲ್ಲಿ ಭಾಗವಹಿಸಿದ್ದರು. ಜತೆಗೆ 1965ರ ಭಾರತ ಪಾಕಿಸ್ತಾನ ಯುದ್ಧದಲ್ಲೂ ಹೋರಾಡಿದ್ದರು. 1978ರಲ್ಲಿ ಅವರು ಸೇವೆಯಿಂದ ನಿವೃತ್ತಿಯಾಗಿದ್ದರು. ಆನಂತರ ಜೇಕಬ್ ಗೋವಾ ಮತ್ತು ಪಂಜಾಬ್‌ಗಳ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ. ಜೇಕಬ್ ಅವರ ನಿಧನಕ್ಕೆ ಬಾಂಗ್ಲಾದೇಶ ಸಂತಾಪ ಸೂಚಿಸಿದೆ. ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಬಾಂಗ್ಲಾದೇಶದಲ್ಲಿ ಶೋಕಾಚರಣೆ ಮಾಡಲಾಗಿದೆ. ಬಾಂಗ್ಲಾ ಪ್ರಧಾನಿ ಷೇಕ್ ಹಸೀನಾ, 'ನಮ್ಮ ವಿಮೋಚನಾ ಯುದ್ಧದ ಧೀರ ಯೋಧ' ಎಂದು ಜೇಕಬ್ ಅವರನ್ನು ಬಣ್ಣಿಸಿದ್ದಾರೆ.**



ಬ್ರಿಟನ್ ಸಂಸತ್ತಿನಲ್ಲಿ ಭಾರತೀಯ ಮೂಲದ ಸಂಸದರನ್ನು ಅಭಿನಂದಿಸುವ ಮತ್ತು ಸಂಸತ್‌ಗೆ 1892ರಲ್ಲಿ ಏಷ್ಯಾದಿಂದ ಮೊದಲ ಬಾರಿಗೆ ಚುನಾಯಿತರಾದ ದಾದಾಭಾಯ್ ನವರೋಜಿ ಅವರ ಸ್ಮರಣೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಬ್ರಿಟನ್ ಸಂಸತ್‌ಗೆ ಸಾರ್ವಭೌಮ ದೇಶಗಳ ಅತಿಥಿಗಳಿಗೆ ಅವಕಾಶ ನೀಡಿದಾಗ ಮುಂಬೈನ ಶಿಕ್ಷಣ ತಜ್ಞ ಹಾಗೂ ಹತ್ತಿ ಉದ್ಯಮಿಯಾಗಿದ್ದ ನವ್‌ರೋಜಿ ಅವರು 1892ರಲ್ಲಿ ಸ್ಪರ್ಧಿಸಿ ಗೆದ್ದಿದ್ದರು.

**ಮದರಸಾಗಳಲ್ಲಿ ಮಕ್ಕಳಿಗೆ ದೇಶಭಕ್ತ ಮುಸ್ಲಿಂ ನಾಯಕರ ಕಥೆಗಳನ್ನು ಕಲಿಸಿ ಕೊಡುವ ಮೂಲಕ ದೇಶಭಕ್ತಿ ಮೂಡಿಸಬೇಕು. ಈ ಬಗ್ಗೆ ಮುಸ್ಲಿಂ ಸಮುದಾಯದ ಧಾರ್ಮಿಕ ಮುಖಂಡರು ಮುಂದಾಳತ್ವ ವಹಿಸಬೇಕೆಂದು ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಇಂದ್ರೇಶ್ ಕುಮಾರ್ ಒತ್ತಾಯಿಸಿದ್ದಾರೆ. ಮಕ್ಕಳಿಗೆ ಪ್ರಾಥಮಿಕವಾಗಿ ದೇಶವನ್ನು ಪ್ರೇಮಿಸುವ ದೇಶಭಕ್ತಿಯನ್ನು ಕಲಿಸಬೇಕಾಗಿದೆ. ಮದರಾಸಾಗಳಲ್ಲಿಯೂ ಇಂತಹ ಪಾಠಗಳನ್ನು ಮೌಲ್ವಿಗಳು ಕಳುಹಿಸಿಕೊಡಬೇಕಾಗಿದೆ. ಮಕ್ಕಳಿಗೆ ಬಹದ್ದೂರ್ ಶಾ ಜಾಫರ್ ಅವರಂತಹ ದೇಶಭಕ್ತ ಮುಸ್ಲಿಂ ನಾಯಕರ ಕಥೆಗಳನ್ನು ಹೆಚ್ಚು, ಹೆಚ್ಚಾಗಿ ಕಲಿಸಿಕೊಡಬೇಕು. ಮದರಸಾ ಶಿಕ್ಷಣ ಪಡೆದು ಹೊರಬರುವ ಪ್ರತಿಯೊಬ್ಬರೂ ದೇಶಭಕ್ತನಾಗಿರಬೇಕು, ರಾಷ್ಟ್ರೀಯವಾದಿಯಾಗಿರಬೇಕು. ಅದೇ ರೀತಿ ಇಸ್ಲಾಮ್‌ನ್ನು ತಿಳಿದುಕೊಂಡಿರಬೇಕು. ಆ ನಿಟ್ಟಿನಲ್ಲಿ ಈ ರೀತಿ ಪಾಠ ಕಲಿಸಿಕೊಡುವಂತೆ ಮೌಲಾನಾ, ಇಮಾಮ್ ಮತ್ತು ಮೌಲ್ವಿಗಳು ಸಂದೇಶ ನೀಡಬೇಕೆಂದು ಇಂದ್ರೇಶ್ ಕುಮಾರ್ ಅವರು ಮನವಿ ಮಾಡಿದ್ದಾರೆ.**



ಬಿಹಾರದಲ್ಲಿ ಖಡಕ್ ಜಿಲ್ಲಾಧಿಕಾರಿ ಎಂದೇ ಜನಪ್ರಿಯರಾಗಿರುವ ರಾಹುಲ್ ಕುಮಾರ್ ಸಮಾಜ ಪರಿವರ್ತನೆ ಕಾರ್ಯಗಳಲ್ಲೂ ಸಕ್ರಿಯರಾಗಿದ್ದಾರೆ. ಗೋಪಾಲ್‌ಗಂಜ್ ಜಿಲ್ಲೆಯಲ್ಲಿ ವರದಿಯಾಗಿದ್ದ ನೂರಾರು ಸಾಮಾಜಿಕ ಬಹಿಷ್ಕಾರ ಪ್ರಕರಣಗಳನ್ನು ಸುಖಾಂತ್ಯವಾಗಿ ಇತ್ಯರ್ಥ ಪಡಿಸಿದ ಹೆಗ್ಗಳಿಕೆ ಇವರದ್ದು. ಬಿಹಾರದ ಅತಿ ಹಿಂದುಳಿದ ಜಿಲ್ಲೆಗಳ ಪಟ್ಟಿಯಲ್ಲಿ ಗೋಪಾಲ್‌ಗಂಜ್ ಜಿಲ್ಲೆಯೂ ಒಂದು. ಜಿಲ್ಲೆಯ ಸಾಕ್ಷರತೆ ಪ್ರಮಾಣ ಬಹಳ ಕಡಿಮೆ ಇದ್ದು, ಇಲ್ಲಿನ ಜನರಲ್ಲಿ ಅಂಧಕಾರ ಮನೆ ಮಾಡಿದೆ. ದಲಿತರನ್ನು ಸಾರ್ವಜನಿಕ ಬಾವಿ, ಕೆರೆಗಳ ಸಮೀಪ ಬಿಟ್ಟುಕೊಳ್ಳದೆ ಇರುವುದು, ದಲಿತ ಮಹಿಳೆಯರಿಗೆ ಶಾಲೆಗಳಲ್ಲಿ ಬಿಸಿಯೂಟ ಮಾಡದಂತೆ ಬಹಿಷ್ಕರಿಸುವುದು, ವಿಧವೆಯರು ಹಾಗೂ ದೇವದಾಸಿಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ಮಾಡಲು ಅವಕಾಶ ಕೊಡದಿರುವಂತಹ ಘಟನೆಗಳು ಮರುಕಳಿಸುತ್ತಿತ್ತು. ಇಂತಹ ಸಂದರ್ಭಗಳಲ್ಲಿ ರಾಹುಲ್ ಖುದ್ದಾಗಿ ಘಟನಾ ಸ್ಥಳಕ್ಕೆ ತೆರಳಿ ದರ್ಪ ತೋರದೆ ಅಲ್ಲಿನ ಅಶಿಕ್ಷಿತ ಜನರ ಮನ ಪರಿವರ್ತನೆ ಮಾಡುವ ಮೂಲಕ ಪ್ರಕರಣಗಳನ್ನು ಶಾಂತಿಯುತವಾಗಿ ಬಗೆಹರಿಸುತ್ತಾರೆ. ಇದರಿಂದ ಬಹಿಷ್ಕಾರಕ್ಕೆ ಒಳಗಾಗಿದ್ದ ಕಡೆಗಳಲ್ಲಿ ಇಂದು ದಲಿತರು, ವಿಧವೆಯರು ಮತ್ತು ದೇವದಾಸಿಯರು ಮತ್ತೆ ಕೆಲಸ ಮಾಡುತ್ತಿದ್ದಾರೆ. ರಾಹುಲ್ ಜಿಲ್ಲೆಯಾದ್ಯಂತ ಸಮಾಜ ಪರಿವರ್ತನಾ ಅಭಿಯಾನ ನಡೆಸುತ್ತಿದ್ದಾರೆ. ಪ್ರತಿ ಶನಿವಾರ ಮತ್ತು ಭಾನುವಾರ ಕುಗ್ರಾಮಗಳಿಗೆ ತೆರಳಿ ವಾಸ್ತವ್ಯ ಹೂಡುತ್ತಾರೆ. ಗ್ರಾಮಗಳ ಜನರನ್ನು ಒಂದು ಕಡೆ ಸೇರಿಸಿ ಅವರಲ್ಲಿ ಅಸ್ಪೃಶ್ಯತೆ ನಿವಾರಣೆ, ಕಂದಾಚಾರ, ಮೌಢ್ಯಗಳ ಬಗ್ಗೆ ಜಾಗೃತಿ ಮೂಡಿಸುತ್ತಾರೆ. ವಾರ್ತಾ ಇಲಾಖೆ ಹಾಗೂ ಕೆಲ ಸ್ವಯಂ ಸೇವಾ ಸಂಸ್ಥೆಗಳ ನೆರವು ಪಡೆದು ಬೀದಿ ನಾಟಕಗಳು, ಕಿರುಚಿತ್ರ ಹಾಗೂ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸುವ ಮೂಲಕ ಜನರನ್ನು ಅಂಧಕಾರದಿಂದ ಹೊರತರುವ ಪ್ರಯತ್ನ ಮಾಡುತ್ತಿದ್ದಾರೆ. ಇವರು ದೇಶದ ಸಮಸ್ತ ಅಧಿಕಾರಿ ವರ್ಗಕ್ಕೆ ಹಾಗೂ ಯುವಕರಿಗೆ ಪ್ರೇರಣೆ ಮತ್ತು ಮಾದರಿಯಾಗಿದ್ದಾರೆ.

**ಪಾಕಿಸ್ಥಾನದಲ್ಲಿರುವ ಹಿಂದೂ ದೇವಾಲಯಗಳನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಆದರೆ ಉತ್ತಮ ತಾಣದಲ್ಲಿರುವುದರಿಂದ ಕೆಲವು ದೇಗುಲಗಳ ಮೇಲೆ ರಿಯಲ್ ಎಸ್ಟೇಟ್ ಉದ್ಯಮಿಗಳ ಕಣ್ಣು ಬಿದ್ದಿದೆ ಎಂದು ಪಾಕಿಸ್ಥಾನದ ಲೇಖಕಿ ರೀಮಾ ಅಬ್ಬಾಸಿ ತಿಳಿಸಿದ್ದಾರೆ. ಪಾಕಿಸ್ಥಾನದಲ್ಲಿನ ಐತಿಹಾಸಿಕ ದೇಗುಲಗಳ ಕುರಿತು ಪುಸ್ತಕ ಬರೆದಿರುವ ಅವರು, ಪಾಕಿಸ್ಥಾನದಲ್ಲಿ ಹಳೆಯ ಕುಶಲಕರ್ಮಿಗಳು ಇಲ್ಲದ ಕಾರಣ ದೇಗುಲಗಳನ್ನು ಸಂಪೂರ್ಣವಾಗಿ ಪುನರುಜ್ಜೀವನಗೊಳಿಸಲು ಆಗುತ್ತಿಲ್ಲ ಎಂದು ಹೇಳಿದ್ದಾರೆ.**

ಬ್ರಿಟನ್ ಪ್ರವಾಸದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ವೆಂಬ್ಲೆಯಲ್ಲಿ ಕಿಕ್ಕಿರಿದು ಸೇರಿದ್ದ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡುತ್ತ 'ಇಮ್ರಾನ್ ಖಾನ್ ಎಂಬ ಯುವ ಸಂಸ್ಕೃತ ಶಿಕ್ಷಕ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗಾಗಿ 50ಕ್ಕೂ ಹೆಚ್ಚು ಶಿಕ್ಷಣ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಡಿಜಿಟಲ್ ಇಂಡಿಯಾಗೆ ಕೈ ಜೋಡಿಸಿದ್ದಾರೆ' ಎಂದರು. ರಾತ್ರೋರಾತ್ರಿ ಇಮ್ರಾನ್ ಖಾನ್ ಎಂಬ ಪ್ರತಿಭಾವಂತ ಯುವಕನನ್ನು ಇಡೀ ವಿಶ್ವಕ್ಕೆ ಪರಿಚಿತರಾದರು. ಇಮ್ರಾನ್ ಖಾನ್ ಮೂಲತಃ ರಾಜಸ್ತಾನದ ಅಲ್ವಾರದವರು. ಹುಟ್ಟಿದ್ದು ಬಡ ರೈತ ಕುಟುಂಬದಲ್ಲಿ. ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಇದ್ದರೂ ಪ್ರೋತ್ಸಾಹ ಮತ್ತು ಹಣಕಾಸಿನ ಕೊರತೆಯಿಂದಾಗಿ ಕಲಾ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು. ಸಂಸ್ಕೃತ ಕಲಿತಿರುವ ಇಮ್ರಾನ್ ಖಾನ್ ಇಂಗ್ಲಿಷ್ ಮತ್ತು ಅರ್ಥಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ರಾಜಸ್ತಾನ ಶಿಕ್ಷಣ ಇಲಾಖೆಯಲ್ಲಿ ಇಮ್ರಾನ್ ಸಂಸ್ಕೃತ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಕಲಾ ವಿದ್ಯಾರ್ಥಿಯಾಗಿದ್ದರೂ ಗೂಗಲ್ ಮತ್ತು ಸಹೋದರನ ಮೂಲಕ ಆ್ಯಪ್ ಅಭಿವೃದ್ಧಿಪಡಿಸುವುದನ್ನು ಕಲಿತು ಹಲವು ಶಿಕ್ಷಣ ಆ್ಯಪ್‌ಗಳನ್ನು ತಯಾರಿಸಿದ್ದಾರೆ. ವಿಜ್ಞಾನ, ಇತಿಹಾಸ, ಹಿಂದಿ, ಭೂಗೋಳ, ಗಣಿತ, ವಿಜ್ಞಾನ, ತಂತ್ರಜ್ಞಾನ, ಮಾನವೀಕ ಶಾಸ್ತ್ರಗಳು ಸೇರಿದಂತೆ ಒಟ್ಟು 50 ವಿಷಯಗಳ ಆ್ಯಪ್‌ಗಳನ್ನು ತಯಾರಿಸಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವವರಿಗೆ ಮತ್ತು ಎಲ್ಲಾ ಹಂತದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಇದು ಬಹು ಉಪಯುಕ್ತವಾಗಿವೆ. ಈ ಆ್ಯಪ್‌ಗಳು ಹಿಂದಿ ಭಾಷೆಯಲ್ಲಿದ್ದು, ದೇಶದಾದ್ಯಂತ 50 ಲಕ್ಷಕ್ಕೂ ಹೆಚ್ಚು ಜನರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ದೇಶದ ಶೈಕ್ಷಣಿಕ ವಲಯಕ್ಕೆ ತಂತ್ರಾಂಶಗಳ ಕೊಡುಗೆ ನೀಡುವ ಮೂಲಕ ಇಮ್ರಾನ್ ಖಾನ್ ನಮ್ಮ ಯುವ ಜನಾಂಗಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರೆ.

**ದೇಶದಲ್ಲಿ ಪ್ರತಿ ವರ್ಷ 8 ಲಕ್ಷ ಹಿಂದುಗಳನ್ನು ಕ್ರೈಸ್ತ ಹಾಗೂ ಮುಸ್ಲಿಂ ಸೇರಿದಂತೆ ಇತರ ಧರ್ಮಗಳಿಗೆ ಮತಾಂತರ ಮಾಡಲಾಗುತ್ತಿದೆ ಎಂದು ವಿಶ್ವ ಹಿಂದು ಪರಿಷತ್‌ನ ಪ್ರಧಾನ ಕಾರ್ಯದರ್ಶಿ ವೈ. ರಾಘವಲು ತಿಳಿಸಿದ್ದಾರೆ. ಒಳನುಸುಳುವಿಕೆಯನ್ನು ಪ್ರೋತ್ಸಾಹಿಸುವುದು, ಹಿಂದುಗಳ ಭೂಮಿಯನ್ನು ಕಿತ್ತುಕೊಳ್ಳುವುದು ಹಾಗೂ ಭಾರತೀಯ ಸಮುದಾಯದಲ್ಲಿ ಒಡಕು ಮೂಡಿಸುವುದಕ್ಕಾಗಿ ಇತರ ಧರ್ಮದ ಜನರು ಹಿಂದುಗಳನ್ನು ಮತಾಂತರಗೊಳಿಸುತ್ತಿದ್ದಾರೆ ಎಂದು ವಿಶ್ವ ಹಿಂದು ಪರಿಷತ್ ತಿಳಿಸಿದೆ.**



## ಶ್ರೀಕಾಂತ್ ಬೊಲ್ಲಾ

**ಆಗ ತಾನೇ ಹುಟ್ಟಿದ ಗಂಡು ಶಿಶು ಅದು! ಆದರೆ ಪೋಷಕರ ಮುಖದಲ್ಲಿ ಮಗು ಜನಿಸಿದ ಸಂಭ್ರಮ ಇರಲಿಲ್ಲ. ಯಾಕೆಂದರೆ ಆ ಮಗುವಿನ ಎರಡು ಕಣ್ಣುಗಳು ಮುಚ್ಚಿದ್ದವು, ವೈದ್ಯರು ಕಣ್ಣು ಮುಚ್ಚಿರುವುದರಿಂದ ಮುಂದೆ ದೃಷ್ಟಿ ಬರುವ ಸಾಧ್ಯತೆಗಳು ಕಡಿಮೆ ಎಂದು ಹೇಳಿದ್ದರು. ಇತ್ತ ಪೋಷಕರು ಜೀವನ ಪೂರ್ತಿ ಅಂಧ ಮಗುವನ್ನು ಸಾಕುವುದು ಹೇಗೆ, ಮುಂದಿನ ಭವಿಷ್ಯ ಏನು ಎಂಬ ಚಿಂತೆಯಲ್ಲಿ ಮುಳುಗಿದ್ದರು! ಈ ನಡುವೆ ಕೆಲವರು ಮಗುವನ್ನು ಬಿಸಾಡಿ ಅಥವಾ ಯಾವುದಾದರೊಂದು ಅನಾಥಾಶ್ರಮಕ್ಕೆ ಕೊಟ್ಟು ಬಿಡಿ ಎಂಬ ಸಲಹೆಗಳನ್ನು ಕೊಟ್ಟಿದ್ದರು. ನೆರೆಹೊರೆಯವರ ಸಲಹೆಗಳನ್ನು ಕೇಳದ ಆ ತಂದೆತಾಯಿಗಳು, ಪಾಲಿಗೆ ಬಂದದ್ದು ಪಂಚಾಮೃತ ಎಂದುಕೊಂಡು ಮುದ್ದಿನಿಂದ ಸಾಕತೊಡಗಿದರು. ಮುಂದೆ ಆ ಮಗು ಯಶಸ್ವಿ ಉದ್ಯಮಿಯಾಗಿ ಬೆಳೆದು, ಸಾವಿರಾರು ಜನರಿಗೆ ಬದುಕು ಕಟ್ಟಿಕೊಟ್ಟಿದ್ದಾನೆ. ಇದು ಆಂಧ್ರಪ್ರದೇಶ ಮೂಲದ ಅಂಧ ಯುವಕ ಶ್ರೀಕಾಂತ್ ಬೊಲ್ಲಾ ಅವರ ಸಾಧನೆಯ ಕಥೆ. ಶ್ರೀಕಾಂತ್ ಅತಿ ಕಿರಿಯ ವಯಸ್ಸಿಗೆ ಹಲವಾರು ಸಂಕಷ್ಟಗಳನ್ನು ಮೆಟ್ಟಿನಿಂತು ಸಾಧಕರಾಗಿದ್ದಾರೆ. 50 ಕೋಟಿ ರೂಪಾಯಿ ಬಂಡವಾಳ ಹೊಂದಿರುವ ಬೊಲ್ಲಾಂತ್ ಕಂಪೆನಿಯ ಮಾಲೀಕರಾಗಿದ್ದಾರೆ.**

**ನನ್ನ ತಂದೆತಾಯಿಗಳು ಬಡವರು, ಜತೆಗೆ ಅವಿದ್ಯಾವಂತರು. ಹೇಗೋ ಕಷ್ಟಪಟ್ಟು ಹತ್ತನೇ ತರಗತಿವರೆಗೆ ಓದಿಸಿದರು. ವಿಜ್ಞಾನ ವಿಷಯದಲ್ಲಿ ಪಿಯುಸಿ ಪಡೆದ ನಾನು, ನಂತರ ಅಮೆರಿಕದ ಐಐಟಿ ಪ್ರವೇಶ ಪರೀಕ್ಷೆ ಬರೆದು ಆಯ್ಕೆಯಾದೆ. ಅಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಭಾರತಕ್ಕೆ ಮರಳಿದೆ. ಇಲ್ಲಿ ಕ್ರೌಡ್ ಫಂಡಿಂಗ್‌ನಲ್ಲಿ ಬಂಡವಾಳ ಸಂಗ್ರಹಿಸಿ, ಅಡಿಕೆ ಎಲೆ, ಪೇಪರ್‌ನಲ್ಲಿ ತಟ್ಟೆ, ಲೋಟ ತಯಾರಿಸುವ ಉದ್ಯಮ ಆರಂಭಿಸಿದೆ. ಇದು ನನ್ನ ಕೈಹಿಡಿಯಿತು, ಇಂದು ನಮ್ಮ ಸಂಸ್ಥೆಯಲ್ಲಿ ಶೇ.70 ರಷ್ಟು ಅಂಗವಿಕಲರು ಕೆಲಸ ಮಾಡುತ್ತಿದ್ದಾರೆ. ಕರ್ನಾಟಕದ ಹುಬ್ಬಳ್ಳಿ ಸೇರಿದಂತೆ ದೇಶದಲ್ಲಿ ಒಟ್ಟು 4 ಉತ್ಪಾದನಾ ಘಟಕಗಳನ್ನು ತೆರೆಯಲಾಗಿದ್ದು ವಾರ್ಷಿಕ ಹತ್ತಾರು ಕೋಟಿ ರೂಪಾಯಿ ಆದಾಯ ಬರುತ್ತಿದೆ ಎಂದು ಶ್ರೀಕಾಂತ್ ಹೇಳುತ್ತಾರೆ. ಇಚ್ಛಾಶಕ್ತಿ, ಕನಸು, ಗುರಿ, ಕಠಿಣ ಪರಿಶ್ರಮದ ಮೂಲಕ ನಾವು ಅಂದುಕೊಂಡಿದ್ದನ್ನು ಸಾಧಿಸಬಹುದು ಎಂಬುದಕ್ಕೆ ಶ್ರೀಕಾಂತ್ ಮಾದರಿಯಲ್ಲವೇ?**

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-2-2016






# ಮೊಬೈಲ್ ಸಂಪರ್ಕಗಳ ವರ್ಗಾವಣೆ

ನಮ್ಮ ಸಂಪರ್ಕದಲ್ಲಿರುವವರ ಮೊಬೈಲ್ ಸಂಖ್ಯೆಗಳನ್ನು ನಾವು ಮೊಬೈಲಿನಲ್ಲಿಯೇ ಶೇಖರಿಸಿಡುತ್ತೇವೆ. ಹೊಸ ಮೊಬೈಲ್ ಕೊಂಡಾಗ ಹಳೆ ಮೊಬೈಲಿನಲ್ಲಿರುವ ಸಂಪರ್ಕಗಳನ್ನು ಹೊಸ ಮೊಬೈಲಿಗೆ ವರ್ಗಾಯಿಸುವುದು ಅನಿವಾರ್ಯವಾಗಿಬಿಡುತ್ತದೆ. ಹಳೆಯ ಮೊಬೈಲ್ ಸರಿಯಾಗಿ ಕೆಲಸ ಮಾಡದಿದ್ದರಂತೂ ಇದು ಇನ್ನಷ್ಟು ಸಮಸ್ಯೆ.

ಮೊಬೈಲ್ ಸಂಪರ್ಕಗಳು ಸಿಮ್ ಒಳಗಿರುವ ಶೇಖರಣೆಯಲ್ಲಿ ಅಥವಾ ಮೊಬೈಲಲ್ಲಿರುವ ಮೆಮೊರಿಯಲ್ಲಿ ಸೇವ್ ಆಗಿರಬಹುದು. ಹಳೆಯ ಮೊಬೈಲುಗಳಲ್ಲಿ ಸೀಮಿತ ಸಂಖ್ಯೆಯ ಸಂಪರ್ಕಗಳಿಗೆ ಅವಕಾಶವಿರುತ್ತಿತ್ತು. ಇತ್ತೀಚಿನ ಸ್ಮಾರ್ಟ್ ಫೋನುಗಳಲ್ಲಿ ಸಂಪರ್ಕಗಳನ್ನು ಶೇಖರಿಸುವ ಸಾಮರ್ಥ್ಯದಲ್ಲಿ ಯಾವುದೇ ಮಿತಿಯಿಲ್ಲ.

ನಿಮ್ಮ ಹಳೆಯ ಫೋನ್ ಸ್ಮಾರ್ಟ್ ಫೋನ್ ಅಲ್ಲವಾದಲ್ಲಿ ಸಂಪರ್ಕಗಳ ವರ್ಗಾವಣೆಗೆ ಸುಲಭ ವಿಧಾನ ಸಿಮ್ ಮುಖಾಂತರ ಸಾಗಿಸುವುದು. ಹಳೆ ಫೋನಿನಲ್ಲಿರುವ ಸಂಪರ್ಕಗಳಲ್ಲಿ ಸಿಮ್ ಸಾಮರ್ಥ್ಯದಷ್ಟೂ ಸಿಮ್‌ಗೆ ವರ್ಗಾಯಿಸಿ. ಇದಕ್ಕಾಗಿ, ಸಾಮಾನ್ಯವಾಗಿ Contacts->Settings ಅಲ್ಲಿ 'Copy to Sim' ಆಯ್ಕೆಯನ್ನು ನೀಡಿರುತ್ತಾರೆ. ನಂತರ ಸಿಮ್ ತೆಗೆದು ಹೊಸ ಫೋನಿಗೆ ಹಾಕಿ ಅದರಲ್ಲಿ 'Copy to Phone' ಆಯ್ಕೆ ಮಾಡಿ. ಸಿಮ್ ನೀಡುವ ಶೇಖರಣಾ ಸಾಮರ್ಥ್ಯ ಸೀಮಿತವಾಗಿರುವುದರಿಂದ ನೀವು ಇದನ್ನು ಮೂರ್ನಾಲ್ಕು ಬಾರಿ ಪುನರಾವರ್ತಿಸಬೇಕಾಗಬಹುದು. ಸಿಮ್ ಸಂಪರ್ಕಗಳನ್ನು ಡಿಲೀಟ್ ಮಾಡಿ ಮತ್ತೆ ಮುಂದುವರಿಸಿ.

ನಿಮ್ಮ ಹಳೆಯ ಫೋನ್ ಸ್ಮಾರ್ಟ್ ಫೋನ್ ಆಗಿದ್ದರೆ ಈ ಕೆಲಸ ಸುಲಭವಾಗುತ್ತದೆ. ಆಂಡ್ರಾಯ್ಡ್ ಫೋನ್‌ನಲ್ಲಿ ಸೆಟ್ಟಿಂಗ್ಸ್–>ಜನರಲ್–>ಬ್ಯಾಕಪ್ ಅಂಡ್ ರಿಸ್ಟೋರ್ ಆಯ್ಕೆಯನ್ನು ಬಳಸಿ. Backup my data ಸೆಲೆಕ್ಟ್ ಮಾಡಿ ಮತ್ತು ನಿಮ್ಮ ಗೂಗಲ್ ಅಕೌಂಟ್ ನೀಡಿ. ನಿಮ್ಮ ಮೊಬೈಲ್ ಇಂಟರ್ನೆಟ್ ಸಂಪರ್ಕಕ್ಕೆ ಬಂದಾಗ ನಿಮ್ಮ ಸಂಪರ್ಕಗಳು ಗೂಗಲ್ ಸರ್ವರ್‌ಗೆ ರವಾನೆಯಾಗಿ ಅಲ್ಲಿ ಭದ್ರವಾಗಿರುತ್ತದೆ. ಹೊಸ ಫೋನಿನಲ್ಲಿ ಅದೇ ಬಳಕೆದಾರರಾಗಿ ಲಾಗಿನ್ ಆದಾಗ ಹಳೆಯ ಸಂಪರ್ಕಗಳು ತನ್ನಿಂತಾನೇ ಲೋಡ್ ಆಗುತ್ತವೆ.

**ಇನ್ನೊಂದು ವಿಧಾನ:** ಕಂಪ್ಯೂಟರಿನಲ್ಲಿ Phone Transfer ಎಂಬ ತಂತ್ರಾಂಶವನ್ನು ಬಳಸಿ ಸಂಪರ್ಕ ವರ್ಗಾವಣೆಯನ್ನು ಮಾಡಬಹುದು. (transphone.net ತಾಣದಲ್ಲಿ ಉಚಿತವಾಗಿ ಲಭ್ಯವಿರುತ್ತದೆ.) ಎರಡೂ ಮೊಬೈಲುಗಳನ್ನು ಕಂಪ್ಯೂಟರ್ ಜೊತೆ ಕನೆಕ್ಟ್ ಮಾಡಿ, ತಂತ್ರಾಂಶವನ್ನು ಆರಂಭಿಸಿ. ಆಯ್ಕೆಗಳನ್ನು ಅದುವೇ ನೀಡುತ್ತದೆ.

ಕಂಪ್ಯೂಟರ್ ಇಲ್ಲವಾದಲ್ಲಿ ಮೊಬೈಲ್ ಫೋನಲ್ಲಿ Phone Copier ಎಂಬ ಎಪ್ಲಿಕೇಶನ್ ಬಳಸಿ ಸಂಪರ್ಕಗಳ ವರ್ಗಾವಣೆಯನ್ನು ಮಾಡಬಹುದು. ಐಫೋನ್, ವಿಂಡೋಸ್, ಆಂಡ್ರಾಯ್ಡ್‌ಗಳಿಗೆ ಈ app ಲಭ್ಯವಿದೆ. ನಿಮ್ಮ ಹಳೆಯ ಮತ್ತು ಹೊಸ ಫೋನ್ ಒಂದೇ ಕಾರ್ಯನಿರ್ವಹಣಾ ವ್ಯವಸ್ಥೆ ಹೊಂದಿರದಿದ್ದರೂ ಇದನ್ನು ಬಳಸಬಹುದು.

ಅಂತರ್ಜಾಲ ಸಂಪರ್ಕವಿಲ್ಲದಿರುವಾಗ ಸಂಪರ್ಕಗಳನ್ನು ವರ್ಗಾಯಿಸಬೇಕಾದರೆ CLONEit ಆಪ್ ಬಳಸಬಹುದು. ಒಂದು ಬಾರಿ ನೀವು ಇದನ್ನು ಆನ್–ಲೈನ್ ಮೂಲಕ ಡೌನ್ಲೋಡ್ ಮಾಡಿಕೊಂಡರೆ ಮತ್ತೆ ಇಂಟರ್ನೆಟ್ ಬೇಕಾಗಿಲ್ಲ. ನಿಮ್ಮ ಸಂಪರ್ಕಗಳಲ್ಲದೆ, ಎಸ್.ಎಂ.ಎಸ್ ಸಂದೇಶಗಳು, ಕರೆ ಇತಿಹಾಸ, appಗಳು, ಸೆಟ್ಟಿಂಗ್ ಆಯ್ಕೆಗಳು ಎಲ್ಲವನ್ನೂ ವರ್ಗಾಯಿಸಲು ಈ ಆಪ್ ಸಹಕರಿಸುತ್ತದೆ.




ಸಾವಿರಾರು ವರ್ಷಗಳಿಂದ ತಾಳೆಗರಿಯ ಹಸ್ತಪ್ರತಿಗಳ ರೂಪದಲ್ಲಿ ಹುದುಗಿರುವ ಸಂಸ್ಕೃತದ ಜ್ಞಾನಭಂಡಾರ ನಮ್ಮ ಊಹೆಗೂ ಮೀರಿದ್ದು. ರಾಷ್ಟ್ರೀಯ ತಾಳೆಗರಿ ಅಧ್ಯಯನ ಸಂಸ್ಥೆಯ ಅಂಕಿ–ಅಂಶಗಳ ಪ್ರಕಾರ ಒಟ್ಟಾರೆ ಸುಮಾರು 45 ಲಕ್ಷ ತಾಳೆಗರಿಯ ಹಸ್ತಪ್ರತಿಗಳು ಭಾರತ ಮತ್ತು ಜಗತ್ತಿನಾದ್ಯಂತ ಲಭ್ಯವಿದೆ. ಇವುಗಳು ಭಾರತದ ಪಾಂಡಿಚೇರಿ, ತಂಜಾವೂರು, ಮೈಸೂರು, ಕಾಶಿ, ತಿರುಪತಿ ಮುಂತಾದ ಸಾವಿರಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ಉಪಲಭ್ಯವಿವೆ. ಅದರಲ್ಲಿ ಪುಸ್ತಕರೂಪದಲ್ಲಿ ಹೊರಬಂದಿರುವುದು ಎಷ್ಟಿರಬಹುದು ಹೇಳಿ?

22 ಸಾವಿರ ಮಾತ್ರ! ಅಂದರೆ ಇನ್ನೂ ಲಕ್ಷೋಪಲಕ್ಷ ಪ್ರತಿಗಳಲ್ಲಿ ಅಡಗಿರುವ ರಹಸ್ಯವನ್ನು ಭೇದಿಸುವುದು ಬಾಕಿಯಿದೆ. ಸಾಧಾರಣವಾಗಿ ನಾವುಗಳು ಅಂದುಕೊಂಡಿರುವ ಹಾಗೆ ಸಂಸ್ಕೃತವೆಂದರೆ ಬರೀ ವೇದ, ಉಪನಿಷತ್ತು, ಕಾವ್ಯ, ಸಾಹಿತ್ಯಗಳಲ್ಲ. ಅವುಗಳ ಪಾಲು ಅಬ್ಬಬ್ಬಾ ಎಂದರೆ ಶೇಕಡ 20ರಷ್ಟಿರಬೇಕು ಅಷ್ಟೇ! ಉಳಿದದ್ದರಲ್ಲಿ ಹೆಚ್ಚಾಗಿರುವುದು ವಿಜ್ಞಾನ ಹಾಗೂ ಗಣಿತಕ್ಕೆ ಸಂಬಂಧಿಸಿದ ಜ್ಞಾನಸಂಪತ್ತೇ! ಶಿಲ್ಪಶಾಸ್ತ್ರ, ಸೂರ್ಯಸಿದ್ಧಾಂತ, ಜೀವಶಾಸ್ತ್ರ, ಲೋಹವಿಜ್ಞಾನ, ರತ್ನಶಾಸ್ತ್ರಗಳಿಗೆ ಸಂಬಂಧಿಸಿದ ಯಕ್ಷಪ್ರಶ್ನೆಗಳಿಗೆಲ್ಲ ಸಂಸ್ಕೃತದಲ್ಲಿ ಸಿದ್ಧಸೂತ್ರವಿದೆ. ಹಾಗಾದರೆ ಈ ಭಾಷಾಸಂಪತ್ತನ್ನು ನಾವೆಷ್ಟು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದೇವೆ?

ಭಾರತದಲ್ಲಿ 15 ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. 240 ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ವಿಭಾಗಗಳಿವೆ. ಮೂರು ಕೋಟಿಗೂ ಹೆಚ್ಚಿನ ಜನರು ನಿತ್ಯ ಸಂಸ್ಕೃತವನ್ನು ಕಲಿಯುತ್ತಿದ್ದಾರೆ. 10 ಲಕ್ಷ ಸಂಸ್ಕೃತ ವಿದ್ವಾಂಸರಿದ್ದಾರೆ, ನಮ್ಮ ದೇಶದಲ್ಲಿ. ಇಷ್ಟಿದ್ದರೆ ಸಾಕಲ್ಲ, ಇನ್ನೇನು ಬೇಕು ಅನಿಸುತ್ತದೆ ಅಲ್ಲವೇ? ಇದು ಏನೇನೂ ಸಾಲದು. ನಿಮಗೆ ಗೊತ್ತಿರಲಿ, ಭಾರತವನ್ನು ಹೊರತುಪಡಿಸಿ 30 ದೇಶಗಳು ನಾ ಮುಂದು ತಾ ಮುಂದು ಎಂದು ಮುಗಿಬಿದ್ದು ಸಂಸ್ಕೃತವನ್ನು ಕಲಿಯುತ್ತಿವೆ! ವಿದೇಶಗಳ 254 ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತದ ಕಲಿಕೆ ಸಾಂಗವಾಗಿ ಸಾಗಿದೆ! ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಈಗಾಗಲೇ 60 ಸಾವಿರ ತಾಳೆಗರಿಗಳ ಪ್ರತಿಗಳನ್ನು ತನ್ನೆದುರು ಹರವಿಕೊಂಡು ಸಂಶೋಧನಾ ನಿರತವಾಗಿದೆ. ನಮ್ಮ ಛಂದಸ್ಸಿನ ಲಘು ಗುರು (1, 2)ಗಳನ್ನು ಕರಾರುವಾಕ್ಕಾಗಿ ಅಳವಡಿಸಿಕೊಂಡು ಸೂಪರ್ ಕಂಪ್ಯೂಟರ್ ತಯಾರಿಸುವುದು ಹೇಗೆ ಎಂದು ಅದು ಒಂದೊಂದೇ ತಾಳೆಗರಿಯನ್ನು ಕೆದಕಿ ನೋಡುತ್ತಿದೆ! 6 ಮತ್ತು 7ನೇ ಜನರೇಶನ್ ಕಂಪ್ಯೂಟರನ್ನು ಸಂಸ್ಕೃತದಲ್ಲಿ ಪ್ರಸ್ತುತಪಡಿಸುವ ದಿಕ್ಕಿನಲ್ಲಿ ಸಾಗಿದೆ. ಲಂಡನ್ ಹಾಗೂ ಐರ್ಲ್ಯಾಂಡ್ ದೇಶಗಳ ಬಹಳಷ್ಟು ಶಾಲೆಗಳು ಸಂಸ್ಕೃತ ಕಲಿಕೆಯನ್ನು ಕಡ್ಡಾಯ ಮಾಡಿವೆ. ಹಾಗೆ ಮಾಡುವುದರಿಂದ ಮಿದುಳಿನ ಕಾರ್ಯನಿರ್ವಹಣಾ ಶಕ್ತಿ ಹಾಗೂ ನೆನಪಿನ ಶಕ್ತಿ ಹೆಚ್ಚುತ್ತದೆ ಎಂಬುದು ಆ ದೇಶಗಳಿಗೆ ಅರ್ಥವಾಗಿರುವ ಸತ್ಯ.

# ಮುಸ್ಲಿಂರಲ್ಲಿ ಯುವಕರೇ ಅಧಿಕ




ದೇಶದ ಶೇಕಡಾವಾರು ಜನಸಂಖ್ಯೆಯಲ್ಲಿ ಹಿಂದೂಗಳ ಜನಸಂಖ್ಯೆ ನಿರಂತರ ಕುಸಿತ ಕಾಣುತ್ತಿದ್ದರೆ, ಮುಸ್ಲಿಂ ಜನಸಂಖ್ಯೆ ಹೆಚ್ಚಳಗೊಳ್ಳುತ್ತಿರುವುದು ಪ್ರತೀ ಜನಗಣತಿ ವರದಿಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಇದೀಗ ದೇಶದ ಒಟ್ಟು ಮುಸ್ಲಿಂ ಜನಸಂಖ್ಯೆಯಲ್ಲಿ ಯುವಕರ ಸಂಖ್ಯೆಯೇ ಅಧಿಕವಾಗಿದ್ದು, ಮುಸ್ಲಿಮರ ಜನಸಂಖ್ಯೆಯಲ್ಲಿ ಶೇ 6.9 ರಷ್ಟು ಮಂದಿ ಮಾತ್ರ 60 ವರ್ಷ ವಯಸ್ಸಿಗಿಂತ ಮೇಲಿನವರು. ಕೇಂದ್ರ ಸರ್ಕಾರದ ಹೊಸ ಜನಗಣತಿಯಿಂದ (ಧರ್ಮ ವಯೋಮಾನ ಮತ್ತು ಲಿಂಗ ಆಧಾರಿತ) ಈ ವಿಷಯ ತಿಳಿದುಬಂದಿದೆ.

**ಕಳೆದ ಹತ್ತು ವರ್ಷಗಳ ಅವಧಿಯಲ್ಲಿ (2001–11) ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ. 80.46ರಷ್ಟು ಪಾಲು ಹೊಂದಿದ್ದ ಹಿಂದು ಸಮಾಜ ಈಗ ಶೇ. 79.8ಕ್ಕೆ ತಗ್ಗಿದೆ. ಅಂದರೆ 2001ರಿಂದ 2011ರ ಅವಧಿಯಲ್ಲಿ ಭಾರತದ ಜನಸಂಖ್ಯೆಯಲ್ಲಿ ಹಿಂದುಗಳ ಪಾಲು ಶೇ. 0.66ರಷ್ಟು ಇಳಿಕೆಯಾಗಿದೆ. ಇದೇ ವೇಳೆ 13.4ರಷ್ಟಿದ್ದ ಮುಸ್ಲಿಂ ಜನಸಂಖ್ಯೆ 2011ರ ಹೊತ್ತಿಗೆ ಶೇ. 14.2ಕ್ಕೆ ಏರಿದೆ. ಅಂದರೆ ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಮುಸಲ್ಮಾನರ ಪ್ರಮಾಣ ಶೇ. 0.8 ರಷ್ಟು ಏರಿಕೆಯಾಗಿದೆ. ಇದು 2011ರ ಜನಗಣತಿ ಹೊರಹಾಕಿದ ವಾಸ್ತವ.**

| | 1951 | 1961 | 1971 | 1981 | 1991 | 2001 | 2011 |
|---|---|---|---|---|---|---|---|
| ಹಿಂದು | 84.1 | 83.45 | 82.73 | 82.3 | 81.53 | 80.46 | 79.8 |
| ಮುಸ್ಲಿಂ | 9.8 | 10.69 | 11.21 | 11.75 | 12.61 | 13.43 | 14.23 |

ದೇಶದಲ್ಲಿ ಒಟ್ಟು 17.22 ಕೋಟಿ ಮುಸ್ಲಿಮರಿದ್ದು, ಇದರಲ್ಲಿ ಶೇ. 47.27 ರಷ್ಟು ಮಂದಿ 20 ವರ್ಷ ವಯಸ್ಸಿಗಿಂತ ಕೆಳಗಿನವರು. ಹಿಂದೂಗಳಲ್ಲಿ ಈ ಪ್ರಮಾಣ ಶೇ. 39.8ರಷ್ಟಿದೆ. 0–4 ವರ್ಷ ವಯಸ್ಸಿನೊಳಗಿನವರಲ್ಲಿ ಮುಸ್ಲಿಮರ ಪ್ರಮಾಣ ಹೆಚ್ಚಿದೆ; ಒಟ್ಟು ಜನಸಂಖ್ಯೆಯಲ್ಲಿ ಶೇ. 11.28 ಮಂದಿ (1.94 ಕೋಟಿ) ಈ ವಯಸ್ಸಿನವರಾಗಿದ್ದಾರೆ. ಹಿಂದೂಗಳಲ್ಲಿ ಈ ಪ್ರಮಾಣ ಶೇ. 9.03 (8.73 ಕೋಟಿ) ಆಗಿದೆ. 24 ವರ್ಷ ವಯಸ್ಸಿನೊಳಗಿನವರ ಲೆಕ್ಕಾಚಾರದಲ್ಲಿ ಹಿಂದೂಗಳಿಗೆ ಹೋಲಿಸಿದರೆ ಮುಸ್ಲಿಮರ ಪ್ರಮಾಣ ಹೆಚ್ಚಿದೆ. ಆದರೆ 25–29 ಮತ್ತು 35–39 ವರ್ಷ ವಯಸ್ಸಿನೊಳಗಿನವರಲ್ಲಿ ಹಿಂದೂ ಮತ್ತು ಮುಸ್ಲಿಮರಿಗಿಂತ ಕ್ರೈಸ್ತರ ಪ್ರಮಾಣ ಅಧಿಕವಿದೆ.

ಮುಖ್ಯವಾಗಿ ಜೈನ ಮತ್ತು ಸಿಖ್ ಸಮುದಾಯಗಳಲ್ಲಿ ವಯೋವೃದ್ಧರ ಪ್ರಮಾಣ ಹೆಚ್ಚಿದೆ. ದೇಶದಲ್ಲಿರುವ 44.51 ಲಕ್ಷ ಜೈನರಲ್ಲಿ ಶೇ. 12.39 ರಷ್ಟು ಮಂದಿ ಮತ್ತು 2.08 ಕೋಟಿ ಸಿಖ್ಖರಲ್ಲಿ ಶೇ 11.8 ರಷ್ಟು ಮಂದಿ 60 ವರ್ಷ ವಯಸ್ಸಿಗಿಂತ ಮೇಲಿನವರು.




# ಕೇರಳ: ಶೇ. 100 ಸಾಕ್ಷರ ನಾಡು

ಕೇರಳ ರಾಜ್ಯ ಸಂಪೂರ್ಣ ಸಾಕ್ಷರ ನಾಡು ಮಾತ್ರವಲ್ಲದೇ ಪ್ರಾಥಮಿಕ ಶಿಕ್ಷಣದಲ್ಲಿ ಶೇ. 100ರಷ್ಟು ಸಾಧನೆ ಮಾಡಿದೆ ಎಂದು ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು ಇತ್ತೀಚೆಗೆ ಘೋಷಿಸಿದರು. ಈ ಮೂಲಕ ಈ ಸಾಧನೆ ಮಾಡಿದ ದೇಶದ ಮೊದಲ ರಾಜ್ಯ ಎಂಬ ಕೀರ್ತಿಗೆ ಕೇರಳ ಪಾತ್ರವಾಗಿದೆ. ಶಿಕ್ಷಣದಲ್ಲಿ ಸಮಾನತೆ ಕಾಪಾಡಿಕೊಂಡು ಬಂದಿದ್ದರ ಫಲವಾಗಿ ಸಾಕ್ಷರತೆಯಲ್ಲಿ ಕೇರಳ ಈ ಗುರಿ ತಲುಪಿದೆ. ರಾಜ್ಯ ಸರ್ಕಾರ ಕಳೆದೆರಡು ವರ್ಷಗಳಿಂದ 'ಅತುಲ್ಯಂ' ಯೋಜನೆ ಜಾರಿಗೊಳಿಸಿದೆ. ದ್ವಿತೀಯ ಪಿಯುಸಿ ತನಕವೂ ಸಾಕ್ಷರತೆ ಸಾಧಿಸುವುದು ಮುಂದಿನ ಗುರಿಯಾಗಿದೆ ಎಂದು ಶಿಕ್ಷಣ ಸಚಿವರು ತಿಳಿಸಿದ್ದಾರೆ. ಈಗಾಗಲೇ ನಾಲ್ಕನೇ ತರಗತಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡವರಿಗೆ, ಮತ್ತೊಮ್ಮೆ ಪರೀಕ್ಷೆ ಎದುರಿಸಲು ಈ ಯೋಜನೆ ಅಡಿಯಲ್ಲಿ ಅವಕಾಶ ನೀಡಲಾಗಿತ್ತು. ಅಂಗನವಾಡಿಗಳಲ್ಲಿ ನೋಂದಣಿ ಮಾಡಿಕೊಂಡ 15 ರಿಂದ 50 ವರ್ಷದ ಒಳಗಿನವರಿಗೆ, ಸಾಮಾಜಿಕ ನ್ಯಾಯ ಇಲಾಖೆ ಅಡಿಯಲ್ಲಿ ಸೂಕ್ತ ತರಬೇತಿ ನೀಡಲಾಗಿತ್ತು. ಶಿಕ್ಷಣ ಮುಂದುವರಿಸುವ ಸಂಬಂಧ ವಾರ್ಡ್ ಮಟ್ಟದಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಇದರಂತೆ ಪರೀಕ್ಷೆ ಎದುರಿಸಿದ ಅಭ್ಯರ್ಥಿಗಳು ಇಂಗ್ಲಿಷ್‌ನಲ್ಲಿ 75ಕ್ಕೆ 35 ಅಂಕ ಗಳಿಸಿದರೆ, ಉಳಿದ ವಿಷಯಗಳಲ್ಲಿ 50ಕ್ಕೆ 20 ಅಂಕ ಗಳಿಸುವಲ್ಲಿ ಯಶಸ್ವಿಯಾಗಿದ್ದರು. 2015ರ ಜೂನ್‌ನಲ್ಲಿ ರಾಜ್ಯದ 6,613 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಿದ ಪರೀಕ್ಷೆಯಲ್ಲಿ 2.6 ಲಕ್ಷ ಮಂದಿ ನಾಲ್ಕನೇ ತರಗತಿ ತತ್ಸಮಾನ ಪರೀಕ್ಷೆ ಬರೆದಿದ್ದು, ಇವರಲ್ಲಿ ಶೇ.2.2ಲಕ್ಷ ಮಂದಿ ಉತ್ತೀರ್ಣರಾಗಿದ್ದಾರೆ. ಇದರ ಆಧಾರದ ಮೇಲೆ ಈ ಘೋಷಣೆ ಮಾಡಲಾಗಿದೆ.

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ಬದಲಾವಣೆ ಮಾಹಿತಿಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009